# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಆಗಸ್ಟ್ 13, 2024

ಸಂಪುಟ : 51 ಸಂಚಿಕೆ : 91 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ತಜ್ಞರಿಂದ ಅಣೆಕಟ್ಟೆಗಳ ಪರಿಶೀಲನೆ

ಬೆಂಗಳೂರು, ಆ. 12 - ರಾಜ್ಯದ ಎಲ್ಲಾ ಅಣೆಕಟ್ಟೆಗಳ ಸ್ಥಿತಿಗತಿ ಬಗ್ಗೆ ತಾಂತ್ರಿಕ ತಜ್ಞರಿಂದ ಪರಿಶೀಲಿಸಿ ವರದಿ ಪಡೆಯ ಲಾಗುವುದು ಎಂದು ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಆತಂಕ ಪಡುವ ಅಗತ್ಯವಿಲ್ಲ, ನಮ್ಮೆಲ್ಲಾ ಅಣೆಕಟ್ಟುಗಳ ಸುರಕ್ಷತೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಅಣೆಕಟ್ಟುಗಳ ಸ್ಥಿತಿಗತಿಗಳ ಪರಿಶೀಲಿನೆಗಾಗಿ ನೀರಾವರಿ ಮತ್ತು ತಾಂತ್ರಿಕ ತಜ್ಞರ ಸಮಿತಿ ರಚಿಸಿ ವರದಿ ಪಡೆಯಲಾಗುವುದು. ಸಮಿತಿಯು ಅಣೆಕಟ್ಟುಗಳ ಸ್ಥಿತಿಗತಿ, ಏನಾದರೂ ಲೋಪಗಳಿದ್ದಲ್ಲಿ, ದುರಸ್ತಿ ಕೈಗೊಳ್ಳಬೇಕಿದ್ದಲ್ಲಿ, ಬದಲಾವಣೆಗಳೂ ಸೇರಿದಂತೆ ಎಲ್ಲ ಮಾಹಿತಿಯನ್ನು ವರದಿಯಲ್ಲಿ ನೀಡಲಿದೆ.

ಇದರ ಆಧಾರದ ಮೇಲೆ ನಾವು ಅಣೆಕಟ್ಟುಗಳ ಸುರಕ್ಷತೆಗೆ ಮತ್ತಷ್ಟು ಕ್ರಮ ತೆಗೆದುಕೊಳ್ಳುತ್ತೇವೆ. ಅಣೆಕಟ್ಟೆಗಳ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳಿಂದ ತಾತ್ಕಾಲಿಕವಾಗಿ ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದಿರುವುದಾಗಿ ಶಿವಕುಮಾರ್ ತಿಳಿಸಿದರು.

> **ಗೇಟ್‌ನ ಸರಪಳಿ ತುಂಡಾಗಿದ್ದರಿಂದ ಅನಾಹುತ ಸಂಭವಿಸಿದೆ. ದುರಸ್ತಿ ಕಾರ್ಯ ಮತ್ತು ಹೊಸ ಕ್ರೆಸ್ಟ್‌ಗೇಟ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಜಿಂದಾಲ್ ಕಂಪನಿ ಸಹಕಾರದೊಂದಿಗೆ ಗೇಟ್ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ.**
> **- ಡಿ.ಕೆ. ಶಿವಕುಮಾರ್**

ಕೃಷ್ಣರಾಜ ಅಣೆಕಟ್ಟೆಯಲ್ಲಿ ಯಾವುದೇ ಲೋಪವಿಲ್ಲ, ನಾನೇ ಖುದ್ದಾಗಿ ಎಲ್ಲವನ್ನೂ ಪರಿಶೀಲಿಸಿದ್ದೇನೆ, ಕೆಲವರು ರೈತರನ್ನು ಆತಂಕಕ್ಕೆ ಈಡು ಮಾಡಲು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ ಎಂದರು.

ತುಂಗಭದ್ರಾ ಡ್ಯಾಂನ ಒಂದು ಗೇಟ್‌ನ ಸರಪಳಿ ತುಂಡಾಗಿದ್ದರಿಂದ ಅನಾಹುತ ಸಂಭವಿಸಿದೆ. ದುರಸ್ತಿ ಕಾರ್ಯ ಮತ್ತು ಹೊಸ ಕ್ರೆಸ್ಟ್‌ಗೇಟ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಜಿಂದಾಲ್ ಕಂಪನಿ ಸಹಕಾರದೊಂದಿಗೆ ಗೇಟ್ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ. ಅಣೆಕಟ್ಟೆಯಿಂದ 40 ಟಿಎಂಸಿಯಷ್ಟು ನೀರು ಹರಿದ ನಂತರವೇ ನಾವು ಹೊಸ ಕ್ರೆಸ್ಟ್‌ಗೇಟ್ ಕೂಡಿಸಲು ಸಾಧ್ಯ ಎಂದು ಹೇಳಿದರು.

ಸದ್ಯಕ್ಕೆ ಏನೂ ಮಾಡಲಾಗದು, ಒಂದಷ್ಟು ನೀರು ಹರಿದುಹೋಗಲಿದೆ. ಆದರೆ, ಕನಿಷ್ಠ ಒಂದು ಬೆಳೆಗಾದರೂ ನೀರನ್ನು ಉಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ತುಂಗಾಭದ್ರಾ ಅಣೆಕಟ್ಟೆಯ ಪರಿಶೀಲನೆ ಖುದ್ದಾಗಿ ವೀಕ್ಷಿಸಿದ್ದು 70 ವರ್ಷ ಹಳೆಯದಾದ ಸರಪಳಿ ತುಂಡಾಗಿದ್ದರಿಂದ ಕ್ರೆಸ್ಟ್‌ಗೇಟ್ ಮುರಿದಿದೆ. ಬೇರೆ ಅಣೆಕಟ್ಟೆಗಳಲ್ಲಿ ಪ್ರತಿ ಕ್ರೆಸ್ಟ್‌ಗೇಟ್‌ಗೆ ಎರಡು ಸರಪಳಿಗಳಿರುತ್ತವೆ, ಇಲ್ಲಿ ಒಂದೇ ಸರಪಳಿ ಮೇಲೆ ನಿಂತಿದ್ದರಿಂದ ಈ ಅನಾಹುತ ಸಂಭವಿಸಿದೆ ಎಂದರು.

ಘಟನೆಗೆ ಯಾರನ್ನೂ ಹೊಣೆ ಮಾಡುವುದಿಲ್ಲ, ಮೊದಲು ಕ್ರೆಸ್ಟ್‌ಗೇಟ್ ಕೂರಿಸುವ ಕೆಲಸ ಮಾಡಲಾಗುವುದು ಎಂದರು.

## ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧಿ ಕೇಂದ್ರಗಳಿಗೆ ಅವಕಾಶವಿಲ್ಲ

ಬೆಂಗಳೂರು, ಆ. 12 - ಇನ್ನು ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಹೊಸದಾಗಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ತೆರೆಯಲು ಪರವಾನಗಿ ಕೊಡುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಹೇಳಿದ್ದಾರೆ.

ಜನೌಷಧಿ ಮಳಿಗೆಗಳಲ್ಲಿ ಯಾವ ಔಷಧಗಳನ್ನು ಕಡಿಮೆ ಬೆಲೆ ಮಾರಲಾಗುತ್ತದೆಯೋ ಅದೇ ಔಷಧಿಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿಯೇ ನೀಡಲಾಗುತ್ತಿದೆ. ಹಾಗಿರುವಾಗ, ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧಿ ಕೇಂದ್ರಗಳನ್ನು ತೆರೆಯುವ ಅನಿವಾರ್ಯತೆ ಇಲ್ಲ ಎಂದು ಸಚಿವರು ಹೇಳಿದ್ದಾರೆ.

ಹಾಗಾಗಿ, ಇನ್ನು ಮುಂದೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಹೊಸದಾಗಿ ಜನೌಷಧಿ ಮಳಿಗೆಗಳನ್ನು ತೆರೆಯಲು ಪರವಾನಗಿ ನೀಡದಿರಲು




ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ನಾವೇ ಶೇ.100ರಷ್ಟು ಔಷಧಿ ಉಚಿತವಾಗಿ ಕೊಡಬೇಕು ಎಂಬುದು ಸರ್ಕಾರದ ನಿರ್ಧಾರ. ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಔಷಧಿ ಅಂಗಡಿಗಳಿದ್ದರೆ, ಅವರು ಲಾಬಿ ಮಾಡುತ್ತಾರೆ. ವೈದ್ಯರ ಜೊತೆ ಕೈ ಜೋಡಿಸುತ್ತಾರೆ. ಹೀಗಾಗಿ ಅಂಗಡಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ಸಚಿವರು ಹೇಳಿದರು.

ಪ್ರಧಾನ ಮಂತ್ರಿ ಜನೌಷಧಿ ಯೋಜನೆ ಒಳ್ಳೆಯದೇ ಇರಬಹುದು. ಆದರೆ, ಅದು ಆಸ್ಪತ್ರೆಯಲ್ಲಿ ಬೇಡ. ಅದು ಮಾರುಕಟ್ಟೆ ಸ್ಥಳದಲ್ಲಿರಬೇಕು ಎಂದು ಸಚಿವ ಶರಣ ಪ್ರಕಾಶ್ ಪಾಟೀಲ್ ಹೇಳಿದ್ದಾರೆ.

ನನಗೆ ಆಸ್ಪತ್ರೆಗಳಲ್ಲಿ ಯಾವ ಔಷಧಿಗಳನ್ನು ಉಚಿತವಾಗಿ ಕೊಡಲಾಗುತ್ತದೆ ಎಂಬುದು ಗೊತ್ತಿದೆ. ಆಸ್ಪತ್ರೆಗಳಲ್ಲೇ ಉಚಿತವಾಗಿ ಔಷಧಗಳು ಸಿಗುವುದರಿಂದ ಜನರಿಗೆ ಅದು ಎಷ್ಟರ ಮಟ್ಟಿಗೆ ನೆರವಾಗುತ್ತದೆ ಎಂಬುದು ಸಹ ಗೊತ್ತಿದೆ. ಆ ಹಿನ್ನೆಲೆಯಲ್ಲಿ ಹೇಳುವುದಾದರೆ, ಕಡಿಮೆ ಹಣದಲ್ಲಿ ಔಷಧಿ ಸಿಗುತ್ತದೆ ಎಂದ ಮಾತ್ರಕ್ಕೆ ಜನರು ಉಚಿತವಾಗಿ ಸಿಗುವುದನ್ನು ಬಿಟ್ಟು ದುಡ್ಡು ಕೊಟ್ಟೇಕೆ ಪಡೆಯಬೇಕು ಎಂಬುದು ನನ್ನ ಪ್ರಶ್ನೆ ಎಂದು ತಿಳಿಸಿದ್ದಾರೆ.

## ವೃತ್ತಿ ರಂಗಾಯಣದ ನಿರ್ದೇಶಕರಾಗಿ ಕಡಕೋಳ



ಬೆಂಗಳೂರು, ಆ. 12 - ದಾವಣಗೆರೆ ವೃತ್ತಿ ರಂಗಾಯಣದ ನಿರ್ದೇಶಕರನ್ನಾಗಿ ಹಿರಿಯ ಸಾಹಿತಿ ಮಲ್ಲಿಕಾರ್ಜುನ ಕಡಕೋಳ ಅವರನ್ನು ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಕಳೆದ ಎರಡು ವರ್ಷ ಕಾಲ ಖಾಲಿ ಇದ್ದ ಈ ಹುದ್ದೆಗೆ ನಿರ್ದೇಶಕರಾಗಿ ಕಡಕೋಳ ಅವರು ಮೂರು ವರ್ಷದ ಅವಧಿಗೆ ನೇಮಕವಾಗಿದ್ದಾರೆ.

ಈ ಹಿಂದೆ ಕರ್ನಾಟಕ ನಾಟಕ ಅಕಾಡೆಮಿ ಮತ್ತು ರಂಗ ಸಮಾಜದ ಸದಸ್ಯರಾಗಿ ಬಾ ಅತಿಥಿ, ರಂಗ ಸಮಾಗಮ, ತಿಂಗಳ ಬೆಳಕಲಿ, ರಂಗದ ಮೆರಗು ಮೊದಲಾದ ಕಾರ್ಯಕ್ರಮಗಳ ಮೂಲಕ ಕಡಕೋಳ ಅವರು ರಂಗಾಸಕ್ತರು ಮತ್ತು ಸರ್ಕಾರದ ಗಮನ ಸೆಳೆದಿದ್ದರು. ದಾವಣಗೆರೆ ವೃತ್ತಿ ರಂಗಾಯಣ ಸ್ಥಾಪನೆಯಲ್ಲೂ ಅವರ ಪರಿಶ್ರಮ ಗಮನಾರ್ಹ. 'ವೃತ್ತಿ ರಂಗಭೂಮಿ : ವರ್ತಮಾನದ ಸವಾಲುಗಳು' ವಿಷಯದ ಮೇಲೆ ಫೆಲೋಶಿಪ್ ಮಾಡಿದ್ದಾರೆ.

## ಕೈಗಾರಿಕಾ ಬೆಳವಣಿಗೆ ದರದಲ್ಲಿ ಇಳಿಕೆ

ನವದೆಹಲಿ, ಆ. 12 - ಭಾರತದ ಕೈಗಾರಿಕಾ ಬೆಳವಣಿಗೆ ಜೂನ್ ತಿಂಗಳಲ್ಲಿ ಶೇ.4.2ಕ್ಕೆ ಇಳಿಕೆಯಾಗಿದೆ. ಉತ್ಪಾದನಾ ವಲಯದಲ್ಲಿ ಕುಸಿತವಾಗಿರುವುದು ಇದಕ್ಕೆ ಪ್ರಮುಖ ಕಾರಣ. ವಿದ್ಯುತ್ ಹಾಗೂ ಗಣಿ ವಲಯಗಳಲ್ಲಿ ಬೆಳವಣಿಗೆಯಾಗಿದೆ.ಮೇ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ಶೇ. 6.2 ರಷ್ಟಿದೆ. ಏಪ್ರಿಲ್ - ಜೂನ್ ಅವಧಿಯಲ್ಲಿ ಬೆಳವಣಿಗೆ ದರ ಶೇ. 5.2ರಷ್ಟಿದೆ.

## ನೇರ ತೆರಿಗೆ ಸಂಗ್ರಹದಲ್ಲಿ ಶೇ.28.48ರ ಹೆಚ್ಚಳ

ನವದೆಹಲಿ, ಆ. 12 - ನೇರ ತೆರಿಗೆ ಸಂಗ್ರಹದಲ್ಲಿ ಶೇ. 28.48ರ ಹೆಚ್ಚಳವಾಗಿದೆ. ಕಳೆದ ಆಗಸ್ಟ್ 11 ರವರೆಗೆ 6.93 ಲಕ್ಷ ಕೋಟಿ ರೂ.ಗಳ ನೇರ ತೆರಿಗೆ ಸಂಗ್ರಹವಾಗಿದೆ.

ವೈಯಕ್ತಿಕ ಆದಾಯ ತೆರಿಗೆ ಪ್ರಮಾಣ 4.47 ಲಕ್ಷ ಕೋಟಿ ರೂ. ಹಾಗೂ ಕಾರ್ಪೊರೇಟ್ ತೆರಿಗೆ 2.22 ಲಕ್ಷ ಕೋಟಿ ರೂ. ಆಗಿದೆ. ಷೇರು ವಹಿವಾಟು ತೆರಿಗೆ ಮೂಲಕ 21,599 ಕೋಟಿ ರೂ. ದೊರೆತಿದೆ. ಕೊಡುಗೆ ತೆರಿಗೆ ಸೇರಿದಂತೆ ಇತರೆ ಮೂಲಗಳಿಂದ 1,617 ಕೋಟಿ ರೂ. ದೊರೆತಿದೆ.

## ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಮರು ಸ್ಪರ್ಧಿಸಿ, ಕಾಂಗ್ರೆಸ್ಸಿಗೆ ಮುಖಭಂಗವಾಗುವಂತೆ ಗೆದ್ದು ಬನ್ನಿ

ದಾವಣಗೆರೆ, ಆ.12- ಕಾಂಗ್ರೆಸ್ ಪಕ್ಷದ ಭಿಕ್ಷೆಯಿಂದ ಬಿಜೆಪಿ ರಾಜ್ಯಾಧ್ಯಕ್ಷರು ಶಾಸಕರಾಗಿರುವುದು ಪಕ್ಷಕ್ಕೆ ಅವಶ್ಯವಿಲ್ಲ. ಆದ್ದರಿಂದ ರಾಜೀನಾಮೆ ಕೊಟ್ಟು ಮರು ಸ್ಪರ್ಧಿಸಿ ಕಾಂಗ್ರೆಸ್ಸಿಗೆ ಮುಖ ಭಂಗವಾಗುವಂತೆ ಗೆದ್ದು ಬನ್ನಿ ಎಂದು ಶಾಸಕ ಬಿ.ಪಿ. ಹರೀಶ್ ಕರೆ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರಾಜಕೀಯದಲ್ಲಿ ಮ್ಯಾಚ್ ಫಿಕ್ಸಿಂಗ್ ಬಗ್ಗೆ ಧ್ವನಿ ಎತ್ತುತ್ತಲೇ ಬಂದಿದ್ದೇನೆ, ನಾಗರಾಜಗೌಡ ಅವರಿಗೆ ಕಾಂಗ್ರೆಸ್ ಅವಕಾಶ ಕೊಟ್ಟಿದ್ದರೆ ವಿಜಯೇಂದ್ರ ಗೆಲ್ಲುತ್ತಿರಲಿಲ್ಲ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಯಲ್ಲಿ ಫಿಕ್ಸಿಂಗ್ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರೇ ಒಪ್ಪಿರುವುದು ಕಾಣುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ಸಿನ ಅನ್ಯಾಯ-ಅಕ್ರಮವನ್ನು ಬಿಜೆಪಿ ಮುಚ್ಚಿ ಹಾಕುವುದು, ಬಿಜೆಪಿಯ ಸೀಟ್ ಗೆಲುವಿಗೆ ಕಾಂಗ್ರೆಸ್‌ನವರು ಫಿಕ್ಸಿಂಗ್ ಆಗುವಂತಹ ಹೊಂದಾಣಿಕೆ ರಾಜಕೀಯದ ಬೆಳವಣಿಗೆ ರಾಜ್ಯದಲ್ಲಿ ಹೆಚ್ಚಾಗಿದೆ ಎಂದು ದೂರಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಜಿಂಕೆ ಪ್ರಕರಣ ಮುಚ್ಚಿ ಹಾಕಲು ಯಡಿಯೂರಪ್ಪ ಮತ್ತು ಬೊಮ್ಮಾಯಿ ಅವರೇ ಕಾರಣ ಎಂದು ತಿಳಿಸಿದರು.

ವಾಲ್ಮೀಕಿ ಮತ್ತು ಮುಡಾ ಹಗರಣದ ಬಗ್ಗೆ ಸದನದಲ್ಲಿ ಧ್ವನಿ ಎತ್ತಿದಾಗ 'ನೀವು ಮಾಡಿಲ್ವಾ' ಎಂಬ ಉತ್ತರ ಬರುತ್ತವೆಯೇ ಹೊರತು ಅಕ್ರಮ ನಡೆದಿಲ್ಲ ಎಂದು ಹೇಳುತ್ತಿಲ್ಲ. ಇಂತಹ ಬೆಳವಣಿಗೆ ಅಸಹ್ಯಕರವಾಗಿದೆ ಎಂದರು. ರಾಜಕೀಯ ನಾಯಕರು ಒಬ್ಬರಿಗೊಬ್ಬರು ಕಚ್ಚಾಡಿಕೊಂಡು ಹೊಂದಾಣಿಕೆ ರಾಜಕೀಯ ಮಾಡಿದ್ದೇವೆ ಎಂದು ತೋರಿಸುತ್ತಿದ್ದಾರೆ. ಆದ್ದರಿಂದ ಅನ್ಯಾಯ, ಭ್ರಷ್ಟಾಚಾರ ಮಾಡಿದ ಯಾವ ಪಕ್ಷದ ನಾಯಕರಾದರೂ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು.

### ನನ್ನ ಹೋರಾಟದ ಜಯ..!

**ಹರಿಹರ ತಾಲ್ಲೂಕು ಗಡಿ ಭಾಗದಲ್ಲಿ ಹಳ್ಳ, ಗಡಿ ಭಾಗ ಮುಚ್ಚಿರುವುದರ ಬಗ್ಗೆ ಅಧಿವೇಶನದಲ್ಲಿ ಕೇಳಿದಾಗ, ಯಾವುದೇ ಅಕ್ರಮವಾಗಿಲ್ಲ ಎಂದು ಹೇಳಿಕೆ ಕೊಟ್ಟರು. ಇದಾದ 3-4 ದಿನಗಳಲ್ಲಿ ಹಳ್ಳಗಳನ್ನು ಮೊದಲಿನ ಸ್ವರೂಪಕ್ಕೆ ಸರಿಪಡಿಸಿದ್ದಾರೆ. ಇದು ನನ್ನ ಜಯ ಎಂದು ಬಿ. ಪಿ. ಹರೀಶ್ ತಿಳಿಸಿದರು.ಸುಮಾರು 30-40 ಎಕರೆ ಗೋಮಾಳ ಜಾಗ ಒತ್ತುವರಿ ಮತ್ತು ಸರ್ಕಾರದ ಜಮೀನುಗಳಲ್ಲಿ ಕೆರೆ ನಿರ್ಮಾಣ ಮಾಡಿದ್ದಾರೆ.**
**ಇವುಗಳು ಮುಂದಿನ ದಿನಗಳಲ್ಲಿ ಹೊರಬರಲಿವೆ ಎಂದು ಮಾಹಿತಿ ನೀಡಿದರು.**

## ವಿನಯ್ ಉಚ್ಚಾಟನೆಗೆ ಶಿಸ್ತು ಸಮಿತಿಗೆ ಶಿಫಾರಸ್ಸು

ದಾವಣಗೆರೆ, ಆ.12- ವಿರೋಧ ಪಕ್ಷದವರ ಜತೆ ಸೇರಿ ಮುಖ್ಯಮಂತ್ರಿಗಳಿಗೆ ಅವಮಾನ ಮಾಡಲು ಹೊರಟಿರುವ ಜಿ.ಬಿ. ವಿನಯ್ ಕುಮಾರ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸುವಂತೆ ಶಿಸ್ತು ಸಮಿತಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ ತಿಳಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಷ್ಟ-ಸುಖ ಎರಡರಲ್ಲೂ ಶಾಮನೂರು ಕುಟುಂಬ ಇದೆ. ನಮ್ಮ ನಾಯಕರ ಬಗ್ಗೆ ಮಾತನಾಡುವ ನೈತಿಕ ಹಕ್ಕು ವಿನಯ್ ಕುಮಾರ್ ಅವರಿಗಿಲ್ಲ ಎಂದು ಅವರ ಹೇಳಿಕೆಗೆ ತಿರುಗೇಟು ನೀಡಿದರು.

ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮೈಸೂರಿನಲ್ಲಿ ನಡೆದ ಜನಾಂದೋಲನ ಸಭೆಯಲ್ಲಿ ಭಾಗವಹಿಸಿ ಸಿದ್ದರಾಮಯ್ಯ ಅವರಿಗೆ ಬೆಂಬಲ ಸೂಚಿಸಿದ್ದಾರೆ ಎಂದು ಮಂಜಪ್ಪ ಅವರು ಸ್ಪಷ್ಟನೆ ನೀಡಿದರು.



ಸಚಿವ ಶಾಮನೂರು ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಸಿದ್ದರಾಮೋತ್ಸವ ನಡೆದ ಪರಿಣಾಮ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಲು ಸಹಕಾರಿಯಾಯಿತು.

ಇಂತಹ ಕಾಳಜಿ ಶಾಮನೂರು ಕುಟುಂಬ ಹೊಂದಿದೆ ಎಂದು ತಿಳಿಸಿದರು.

ಶಾಮನೂರು ಕುಟುಂಬ ಜನಾಂದೋಲನ ಸಭೆಗೆ ಸ್ಪಂದಿಸಿಲ್ಲ ಎಂದು ಟೀಕಿಸುವ ವ್ಯಕ್ತಿಗೆ ಪಕ್ಷ ಹಾಗೂ ಜಿಲ್ಲೆಯ ಇತಿಹಾಸ ಗೊತ್ತಿಲ್ಲ. ಅಹಿಂದ ವರ್ಗ, ಮೇಲ್ಜಾತಿ, ಕೆಳಜಾತಿ ಎಂದು ಜನರಲ್ಲಿ ಭಿನ್ನಾಭಿಪ್ರಾಯ ಮೂಡಿಸಿ, ಪಕ್ಷ ಒಡೆಯುವ ವಿನಯ್ ಕಾರ್ಯ ಖಂಡನೀಯ ಎಂದರು.

ನಾಯಕರನ್ನು ಟೀಕಿಸುವುದು ಮತ್ತು ಅಹಿಂದ ವರ್ಗದ ಹೆಸರಿನಲ್ಲಿ ಜನರನ್ನು ದಾರಿ (3ನೇ ಪುಟಕ್ಕೆ)

## ಬಾಂಗ್ಲಾದಲ್ಲಿ ನಗದು ಹಣಕ್ಕೆ ಬರ

ಢಾಕಾ, ಆ. 12 - ಬ್ಯಾಂಕುಗಳಿಂದ ಬಿಡಿಸಿಕೊಳ್ಳಬಹುದಾದ ಹಣದ ಮೇಲೆ ಬಾಂಗ್ಲಾ ದೇಶ ಬ್ಯಾಂಕ್ ಮಿತಿ ಹೇರಿದೆ. ಇದರಿಂದಾಗಿ ಬಾಂಗ್ಲಾದೇಶದಲ್ಲಿ ನಗದಿನ ಬಿಕ್ಕಟ್ಟು ಉಂಟಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಖಾತೆ ಒಂದರಿಂದ 2 ಲಕ್ಷ ಟಾಕಾ ಸುಮಾರು (1.42 ಲಕ್ಷ ರೂಪಾಯಿ) ಮಾತ್ರ ಬಿಡಿಸಿಕೊಳ್ಳಬಹುದು ಎಂದು ಬಾಂಗ್ಲಾದೇಶ ಬ್ಯಾಂಕ್ ಶನಿವಾರದಂದು ಆದೇಶ ಹೊರಡಿಸಿತ್ತು. ಇದಕ್ಕೂ ಮುಂಚೆ ನಗದು ಬಿಡಿಸಿಕೊಳ್ಳುವುದರ ಮೇಲಿನ ಮಿತಿ 1 ಲಕ್ಷ ಟಾಕಾ ಆಗಿತ್ತು.

ಪೊಲೀಸರು ಇನ್ನೂ ಪೂರ್ಣಕಾಲಿಕವಾಗಿ ಕರ್ತವ್ಯಕ್ಕೆ ಮರಳಿಲ್ಲ. ಈ ಹಿನ್ನೆಲೆಯಲ್ಲಿ ಭದ್ರತಾ ದೃಷ್ಟಿಯಿಂದ (3ನೇ ಪುಟಕ್ಕೆ)

## ಹಿಂಡನ್‌ಬರ್ಗ್ ಆರೋಪ ಯಥಾಸ್ಥಿತಿಯಲ್ಲಿ ಷೇರುಪೇಟೆ

ಮುಂಬೈ, ಮೇ 12 - ಷೇರುಪೇಟೆ ನಿಯಂತ್ರಕ ಸೆಬಿ ಮುಖ್ಯಸ್ಥೆ ಮಾಧವಿ ಬುಚ್ ಹಾಗೂ ಅವರ ಪತಿ ವಿರುದ್ಧ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ ಷೇರುಪೇಟೆಯಲ್ಲಿ ಮುಂಜಾನೆ ಕುಸಿತವಾದರೂ ನಂತರ ಚೇತರಿಕೆ ಕಂಡು ಬಂದಿದೆ.

ಬಿ.ಎಸ್.ಇ. ಸೂಚ್ಯಂಕ 56.99 ಅಂಕಗಳ ಇಳಿಕೆ ಕಂಡು, 79,648.92 ಅಂಕಗಳಲ್ಲಿ ಅಂತ್ಯವಾಯಿತು. ಬೆಳಿಗ್ಗೆ ಸೂಚ್ಯಂಕ 479.78 ಅಂಕಗಳ ಕುಸಿತ ಕಂಡಿತ್ತಾದರೂ, ನಂತರ ಚೇತರಿಸಿಕೊಂಡಿತು. ಎನ್.ಎಸ್.ಇ. (3ನೇ ಪುಟಕ್ಕೆ)

## ಹಿರಿಯ ಬಸವ ತತ್ವ ಪಾಲಕ ಶತಾಯುಷಿ ಸಿದ್ರಾಮಣ್ಣ ಇನ್ನಿಲ್ಲ



ದಾವಣಗೆರೆ, ಆ.12 - ಹಿರಿಯ ಬಸವ ತತ್ವ ಪಾಲಕರೂ, ಅನುಭವ ಮಂಟಪದ ಮಾಜಿ ಸಂಚಾಲಕರೂ ಆದ ಶತಾಯುಷಿ ವಿ. ಸಿದ್ದರಾಮಣ್ಣ ಅವರು ಇಂದು ಮಧ್ಯಾಹ್ನ 2 ಗಂಟೆಗೆ ನಿಧನರಾದರು.

ಮೃತರಿಗೆ ಸುಮಾರು 104 ವರ್ಷ ವಯಸ್ಸಾಗಿತ್ತು. ಕೆಲ ದಿನಗಳಿಂದ ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಎಸ್.ಎಸ್. ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಮೂಲತಃ ಹರಪನಹಳ್ಳಿ ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮದವರಾದ ಸಿದ್ದರಾಮಣ್ಣ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.


ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ಸ್ಥಳೀಯ ಸರಸ್ವತಿ ನಗರದಲ್ಲಿರುವ ಬಸವ ಬಳಗದಲ್ಲಿ ನಾಳೆ (3ನೇ ಪುಟಕ್ಕೆ)

## ಬಿಹಾರ : ನೂಕುನುಗ್ಗಲಿನಲ್ಲಿ 7 ಸಾವು

ಜೆಹಾನಾಬಾದ್, ಆ. 12 - ಬಿಹಾರದ ಜೆಹಾನಾಬಾದ್ ಜಿಲ್ಲೆಯ ಬಾಬಾ ಸಿದ್ದೇಶ್ವರ ನಾಥ ದೇವಾಲಯದ ಬಳಿ ಸಂಭವಿಸಿದ ನೂಕು ನುಗ್ಗಲಿನಲ್ಲಿ ಏಳು ಜನ ಸಾವನ್ನಪ್ಪಿದ್ದಾರೆ ಹಾಗೂ 16 ಜನ ಗಾಯಗೊಂಡಿದ್ದಾರೆ.

ಭಾನುವಾರ ರಾತ್ರಿಯ 11.30ರ ಸಮಯದಲ್ಲಿ ದೇವಾಲಯದ ಸುತ್ತ ನೂಕುನುಗ್ಗಲು ಸಂಭವಿಸಿದೆ. ಮೃತರಲ್ಲಿ ಆರು ಮಹಿಳೆಯರು ಸೇರಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.


### 16ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಹೆಚ್. ಯಂಕಾನಾಯ್ಕ
ಮಾಜಿ ಶಾಸಕರು, ಹರಪನಹಳ್ಳಿ.
ನೀವು ನಮ್ಮನ್ನು ಅಗಲಿ
ದಿನಾಂಕ : 13.8.2024ಕ್ಕೆ
16 ವರ್ಷಗಳು ಕಳೆದಿವೆ.
ಸದಾ ನಿಮ್ಮ ಆಶೀರ್ವಾದ
ಮತ್ತು ಮಾರ್ಗದರ್ಶನದಲ್ಲಿ
ನಡೆಯುತ್ತಿರುವ...
ಶ್ರೀಮತಿ ಉಷಾ ಕಾಶೀನಾಥ್, ಅಧ್ಯಕ್ಷರು
ಶ್ರೀ ವೈ. ಕಾಶೀನಾಥ್, ವಕೀಲರು, ಕಾರ್ಯದರ್ಶಿಗಳು ಹಾಗೂ ಕಾರ್ಯಕಾರಿ ಮಂಡಳಿ
ಶ್ರೀ ವೆಂಕಟೇಶ್ವರ ವಿದ್ಯಾಸಂಸ್ಥೆ (ರಿ.), ಪುಣಭಗಟ್ಟೆ
ಜತಿನ್ ಕೆ. ಸೋನೆ, ಕೌಶಿಕ್ ಕೆ. ಸೋನೆ,
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧುಗಳು ಹಾಗೂ
ಪ್ರಾಂಶುಪಾಲರು & ಸಿಬ್ಬಂದಿ.
SHY PU ಕಾಲೇಜು, ಗುಂಡಗತ್ತಿ, ಮುಖ್ಯ ಶಿಕ್ಷಕರು & ಸಿಬ್ಬಂದಿ
ಶ್ರೀ ದುರ್ಗಾಂಬಿಕಾ ಪ್ರೌಢಶಾಲೆ, ಚಿಕ್ಕಮೇಗಳಗೆರೆ.
ಶ್ರೀ ವೆಂಕಟೇಶ್ವರ ಪ್ರೌಢಶಾಲೆ, ಗುಂಡಗತ್ತಿ.
ಫೋ. ; 80952 66555, 94800 42866, 97310 81577

### ಹಾರ್ದಿಕ ಶುಭಾಶಯಗಳು



ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣಕ್ಕೆ
ನಿರ್ದೇಶಕರಾಗಿ ಆಯ್ಕೆಯಾಗಿರುವ
ಶ್ರೀ ಮಲ್ಲಿಕಾರ್ಜುನ ಕಡಕೋಳ
ಇವರಿಗೆ ಹಾರ್ದಿಕ ಶುಭಾಶಯಗಳು.
ಶುಭ ಕೋರುವವರು
ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ
ಪುರಸ್ಕೃತರಾದ ನೀಲಗುಂದ ಬಸವನಗೌಡ್ರು, ಶ್ರೀಮತಿ ಬಿ. ಸಾವಿತ್ರಮ್ಮ,
ಬಿ.ಸುಜಾತ, ಖಾದರ್ ಪಿ., ಶ್ರೀರಾಮನಗರದ ಕಮಲಮ್ಮ, ಮಲ್ಲೇಶ್,
ಪ್ರೇಮಲತಾ, ಲಿಂಗರಾಜಗೌಡ್ರು ಮಾವಲಿ, ರಾಜಶೇಖರ್ ಚಿಕ್ಕಬ್ಬೂರು,
ಗುರುರಾಜ ವಿ. ಸೋಮಣ್ಣನವರ್, ಬಿ. ಉಮಾಶ್ರೀ, ಕಾಟೇನಹಳ್ಳಿ ಎಲಿಗಾರ್
ಹೊನ್ನಪ್ಪ, ವೀರಭದ್ರಪ್ಪ, ಎಸ್.ಜಿ. ಗೋವಿಂದಪ್ಪ, ಅಣ್ಣಪ್ಪ, ಹರಪನಹಳ್ಳಿ,
ಡಿ.ಜಿ. ನಾಗರಾಜಪ್ಪ ಮುದಹದಡಿ, ಬಸವರಾಜ್ ಗುಂಡೇನಹಳ್ಳಿ,
ಶ್ರೀ ಬನಶಂಕರಿ ಡ್ರಾಮಾ ಸೀನ್ಸ್ ಕೆ.ಎಸ್. ರಾಮಾಚಾರ್,
ಶಶಿಧರ ಬಸವ ಕಲಾ ಬಸಾಪುರ, ದಾವಣಗೆರೆ ಹಾಗೂ ಶ್ರೀ ಶೈಲ ಮಲ್ಲಿಕಾರ್ಜುನ
ವಿವಿಧ ನಾಟಕ ಕಲಾವಿದರ ಸಂಘ ದಾವಣಗೆರೆಯ ಸರ್ವ ಸದಸ್ಯರು.


ನೀಲಗುಂದ ಬಸವನಗೌಡ್ರು


ಶ್ರೀಮತಿ ಬಿ. ಸಾವಿತ್ರಮ್ಮ


ಖಾದರ್ ಪಿ.


ಶ್ರೀಮತಿ ಕಮಲಮ್ಮ

ಶ್ರೀಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘ, ದಾವಣಗೆರೆ.

ಈ ಹಬ್ಬಗಳ ಶುಭ ಸಂದರ್ಭದಲ್ಲಿ ಪಡೆಯಿರಿ ಅತ್ಯುನ್ನತ ಕೊಡುಗೆಗಳು ಹಾಗು ರಿಯಾಯಿತಿಗಳು ನಿಮ್ಮ ಕೆ. ಜೆ. ಹ್ಯುಂಡಾಯ್ ಕಾರ್ ಶೋರೂಂನಲ್ಲಿ ಮಾತ್ರ.




Grand i10 NIOS Benefits upto ₹48 000*
i20 Benefits upto ₹45 000*
AURA Benefits upto ₹43 000*
VERNA Benefits upto ₹35 000*
ALCAZAR Benefits upto ₹85 000*
TUCSON Benefits upto ₹50 000*

Hyundai Cl!ck to Buy Scan here
3 YEAR Unlimited** Kilometer Warranty
UPTO 7 YEARS Extended Warranty^
HYUNDAI

K J HYUNDAI | 371/271, Avaragere, P B Road, **Davangere**, Ph: 7022042241, 7022001205, 7022001207, 9148005999. BVKS Layout, Bheemasamudra Main Road, **Chitradurga**-577501, Ph: 9980759983, 7022001208, 7022426017, 9629868009, 7022898488. NH-13, Holalkere Road, **Channagiri** - 577213, Ph: 6366508866, 7022898487, 9148004999. **Ranebennur** – Coming soon

Terms & Conditions apply: *Scheme is applicable on selected variants of Hyundai VENUE & Hyundai EXTER cars purchased between 1st ~ 31st August 2024. Cash discount can't be availed against this offer. Benefits mentioned include applicable cash, exchange and accessories package benefits. Benefits may vary with variants. 3-year unlimited km warranty is applicable for EXTER, VENUE, VENUE N Line, CRETA, CRETA N Line, ALCAZAR, TUCSON, VERNA and IONIQ 5. ^Upto 7 years extended warranty is only for petrol variants and subject to payment of applicable charges. Features and specifications shown may vary or may not be a part of standard fitment and are subject to change without prior notice. Hyundai Motor India reserves the right to change specifications, colour, equipment and schemes at any time without prior notice. EXTER accessory package worth ₹ 17 971 can be availed on payment of ₹4 999. VENUE accessory package worth ₹ 21 628 can be availed on payment of ₹ 5 999. All schemes mentioned are for car deliveries in the month of August 2024.

# ಗ್ರಾಮೀಣ ಜನರ ಅನಾರೋಗ್ಯಕ್ಕೆ ಅನೈರ್ಮಲ್ಯವೇ ಮುಖ್ಯ ಕಾರಣ

## ಹರಪನಹಳ್ಳಿ : ಬಳ್ಳಾರಿ ವಿಮ್ಸ್ ಆಸ್ಪತ್ರೆ ನಿವೃತ್ತ ಸಹ ಪ್ರಾಧ್ಯಾಪಕ ಡಾ. ಶಿವಶಂಕ್ರಪ್ಪ ಮುದೇಗೌಡರ್

ಹರಪನಹಳ್ಳಿ, ಆ.12- ಬಯಲು ಬಹಿರ್ದೆಸೆ, ವೈಯಕ್ತಿಕ ಸ್ವಚ್ಛತೆಯ ಕೊರತೆ, ಘನ ಮತ್ತು ದ್ರವ ತ್ಯಾಜ್ಯಗಳ ಸೂಕ್ತ ಸಂಸ್ಕರಣೆಯ ಕೊರತೆಗಳಿಂದ ಗ್ರಾಮೀಣ ಪ್ರದೇಶದ ಜನರು ನಾನಾ ರೋಗಗಳಿಗೆ ಬಲಿಯಾಗುತ್ತಿದ್ದಾರೆ ಎಂದು ಬಳ್ಳಾರಿ ವಿಮ್ಸ್ ಆಸ್ಪತ್ರೆ ನಿವೃತ್ತ ಸಹ ಪ್ರಾಧ್ಯಾಪಕ ಡಾ. ಶಿವಶಂಕ್ರಪ್ಪ ಮುದೇಗೌಡರ್ ಹೇಳಿದರು.

ತಾಲ್ಲೂಕಿನ ಸಾಸ್ವಿಹಳ್ಳಿ ಗ್ರಾಮದಲ್ಲಿ ಹಿರೇಮೇಗಳಗೇರಿ ಪಾಟೀಲ್ ಸಿದ್ದನಗೌಡ ಪದವಿ ಮಹಾ ವಿದ್ಯಾಲಯದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರದ 4ನೇ ದಿನದ ಕಾರ್ಯಕ್ರಮದಲ್ಲಿ 'ಗ್ರಾಮೀಣ ಭಾಗದಲ್ಲಿ ಆರೋಗ್ಯ ಸಂರಕ್ಷಣಾ ಅರಿವು' ಕುರಿತು ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ, ಮಕ್ಕಳ ಮರಣ, ಲಿಂಗಾನುಪಾತ, ಪರಿಸರ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆ ದುಷ್ಪರಿಣಾಮ ಬೀರಿವೆ. ವಿಶೇಷವಾಗಿ ಆರೋಗ್ಯದ ದೃಷ್ಟಿಯಿಂದ ಘನ ಮತ್ತು ದ್ರವ ತ್ಯಾಜ್ಯದ ದೋಷಪೂರ್ಣ ವಿಲೇವಾರಿಯಿಂದಾಗಿ ಮಲೇರಿಯಾ, ಆಮಶಂಕೆ, ಡೆಂಗ್ಯೂ, ಕಾಲರಾ ಮುಂತಾದ ಕಾಯಿಲೆಗೆ ಕಾರಣವಾಗಿದೆ. ಶೇ.88ರಷ್ಟು ಕಾಯಿಲೆಗಳು ಶುದ್ಧ ನೀರು ಮತ್ತು ನೈರ್ಮಲ್ಯದ ಕೊರತೆಯಿಂದ ಬರುತ್ತವೆ




ಎಂದರು.

ರೋಗ ಮುಕ್ತ ಸಮಾಜ ನಿರ್ಮಾಣ ಮಾಡಲು ಪ್ರತಿ ಹೊಸ ಮನೆಗೆ ಶೌಚಾಲಯ ನಿರ್ಮಿಸಿ ಶೇ.100 ರಷ್ಟು ಬಯಲು ಬಹಿರ್ದೆಸೆ ಮುಕ್ತ ಮಾಡುವುದು. ಗ್ರಾಮೀಣ ಪ್ರದೇಶಗಳ ನೈಸರ್ಗಿಕ ಪರಿಸರ ಸಂರಕ್ಷಣೆಗೆ ತೆರೆದ ಸ್ಥಳದಲ್ಲಿ ಯಾವುದೇ ತ್ಯಾಜ್ಯದ ರಾಶಿ ಹಾಕುವುದು, ಸುಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು. ಗ್ರಾಮೀಣ ಭಾಗದ ನೈರ್ಮಲ್ಯ ಹಾಗೂ ತ್ಯಾಜ್ಯ ನಿರ್ವಹಣೆಗೆ ಒಂದು ಸ್ಪಷ್ಟ ಮತ್ತು ಸಮಗ್ರ ಚೌಕಟ್ಟು ನೀಡಲು ಹೊಸ ನೀತಿ ಜಾರಿಗೆ ತರಬೇಕು ಎಂದರು

'ವಚನ ಸಾಹಿತ್ಯದಲ್ಲಿ ತಾತ್ವಿಕತೆ' ಕುರಿತು ಕನ್ನಡ ಶಿಕ್ಷಕಿ ಮಮತಾಜ್ ಬೇಗಂ ಮಾತನಾಡಿ, ವಚನ ಸಾಹಿತ್ಯ ಎಂಬುದು ಕೊನೆಯಿರದ ತೀರ, ಅದರಲ್ಲಿ ಮಾನವ ನೆಮ್ಮದಿ ಜೀವನಕ್ಕೆ ಅಗತ್ಯವಿರುವ ಸಂಸ್ಕಾರ, ಸಂಸ್ಕೃತಿ ಅಡಗಿದೆ. ಅದನ್ನು ಅರಿತು ಮುನ್ನಡೆದವನೇ ನಿಜ ಶರಣನಾಗುತ್ತಾನೆ. ಭಗವದ್ಗೀತೆಯ ಉದ್ದೇಶಗಳಲ್ಲಿ ಅತ್ಯಂತ ಮುಖ್ಯ ವಾದದ್ದು ವೈಯಕ್ತಿಕ ಬದುಕು ಮತ್ತು ಸಾಮುದಾಯಿಕ ಬದುಕುಗಳ ಮಧ್ಯೆ ಸಾಮರಸ್ಯತೆ ಯನ್ನು ಉಂಟುಮಾಡುವುದು. ವ್ಯಕ್ತಿಯನ್ನು ಸಮಾಜದಿಂದ ಪ್ರತ್ಯೇಕಿಸಿ ಅಥವಾ ಸಮಾಜವನ್ನು ವ್ಯಕ್ತಿಯಿಂದ ಪ್ರತ್ಯೇಕಿಸಿ ವ್ಯಕ್ತಿಯ ಮತ್ತು ಸಮಾಜದ ಅಗತ್ಯಗಳನ್ನಾಗಲೀ, ಕೆಲಸಕಾರ್ಯಗಳನ್ನಾಗಲೀ ಅರ್ಥಮಾಡಿಕೊಳ್ಳ ಬಯಸಿದರೆ ಅದಕ್ಕೆ ಯಾವ ಬೆಲೆಯೂ ಇಲ್ಲ ಎಂದರು.

ಪತ್ರಿಕಾ ಮಾಧ್ಯಮದ ಬಗ್ಗೆ ಯುವಜನತೆಯಲ್ಲಿ ಅರಿವು ಕುರಿತು ಪತ್ರಕರ್ತ ಕೆ.ಉಚ್ಚೆಂಗೆಪ್ಪ ಮಾತನಾಡಿ, ಪತ್ರಿಕೆಗಳು ಮಾಹಿತಿ ಮತ್ತು ಸಾಮಾನ್ಯ ಜ್ಞಾನವನ್ನು ನೀಡುತ್ತವೆ. ಪತ್ರಿಕೆಗಳು ದೇಶದ ಆರ್ಥಿಕ ಪರಿಸ್ಥಿತಿ, ಕ್ರೀಡೆ, ಮನರಂಜನೆ, ವ್ಯಾಪಾರ ಮತ್ತು ವಾಣಿಜ್ಯದ ಬಗ್ಗೆ ಸುದ್ದಿಗಳನ್ನು ನೀಡುತ್ತವೆ. ದಿನಪತ್ರಿಕೆ ಓದುವುದು ಉತ್ತಮ ಅಭ್ಯಾಸವಾಗಿದೆ. ದಿನವೂ ದಿನಪತ್ರಿಕೆ ಓದಿದರೆ ನಮ್ಮ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬಹುದು ಮತ್ತು ಹೆಚ್ಚು ನಿರರ್ಗಳವಾಗಿ ಮಾಡಬಹುದು ಎಂದರು.

ನಿವೃತ್ತ ಶಿಕ್ಷಕ ಹನುಮಂತಪ್ಪ ಮಾತನಾಡಿದರು. ಎಚ್.ಕೆ ಅಜ್ಜನಗೌಡ್ರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎನ್. ಮುತ್ತೇಶ, ಶಿಬಿರಾಧಿಕಾರಿ ಟಿ.ಬಸವರಾಜ, ಉಪನ್ಯಾಸಕರಾದ ಜಿ.ಎಸ್ ಪಟೇಲ್, ಕೆ.ಕೊಟ್ರಗೌಡ, ಆನಂದ ಕರುವಿನ, ಪ್ರವೀಣಕುಮಾರ, ಸಂಗೀತ ಗ್ರಾಮದ ಮುಖಂಡರಾದ ಹಂಪನಗೌಡ, ಬಿ. ಬಸವರಾಜಪ್ಪ, ಚನ್ನನಗೌಡ್ರು, ಅಜ್ಜಯ್ಯ ಸೇರಿ ದಂತೆ ಇತರರು ಇದ್ದರು.

## ಸುಮಲತ ಹರಿಹರ ತಾ.ಪಂ. ಇಓ



ಹರಿಹರ, ಅ. 12 - ನಗರದ ತಾ.ಪಂ. ಇಲಾಖೆಯ ಇಓ ಆಗಿ ಸುಮಲತಾ ಎಸ್.ಪಿ. ಚಂದ್ರಶೇಖರ್ ಅವರು ಇಂದು ಪ್ರಭಾರಿ ಇಓ ರಾಮ ಕೃಷ್ಣಪ್ಪ ನವರಿಂದ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಸುಮಲತಾ ಮಾತನಾಡಿ, ತಾವು ಈ ಹಿಂದೆ ದಾವಣಗೆರೆ ಜಿ.ಪಂ. ಎಪಿಓ ಆಗಿದ್ದೆ. ಅಲ್ಲಿಂದ ರಾಣೆಬೇನ್ನೂರು ತಾ.ಪಂ. ಇಲಾಖೆಯ ಇಓ ಆಗಿ ಕೆಲಸ ಮಾಡಿ ಈಗ ಹರಿಹರ ತಾಲ್ಲೂಕಿನ ಇಓ ಆಗಿ ಅಧಿಕಾರ ಸ್ವೀಕರಿಸಿದ್ದೇನೆ. ರಾಣೆಬೇನ್ನೂರು ತಾ.ಪಂ. ಇಲಾಖೆಯಲ್ಲಿ 40 ಗ್ರಾ.ಪಂ.ಗಳು ಬರುತ್ತವೆ. ಅಲ್ಲಿ ಕರ್ತವ್ಯ ನಿರ್ವಹಣೆಯ ಮಾಡಿದ ಅನುಭವ ಇರುವುದರಿಂದ ಹರಿಹರ ತಾಲ್ಲೂಕಿನ 23 ಗ್ರಾಮ ಪಂಚಾಯತಿಗಳನ್ನು ನಿಭಾಯಿಸುವುದು ಅಷ್ಟೊಂದು ಕಷ್ಟವಾಗದು. ನಾನೂ ಕೂಡ ಇದೇ ತಾಲ್ಲೂಕಿನ ಗುಡ್ಡದ ಬೇವಿನಹಳ್ಳಿ ಗ್ರಾಮದವನು ಆಗಿರೋದರಿಂದ, ಸ್ವಂತ ತಾಲ್ಲೂಕಿನ ಜನರ ಕಷ್ಟಗಳನ್ನು ನಿರ್ವಹಣೆ ಮಾಡುವಂತಹ ಸೌಭಾಗ್ಯ ಸಿಕ್ಕಿರುವುದರಿಂದ ತಾಲ್ಲೂಕಿನ ಪ್ರತಿಯೊಂದು ಗ್ರಾಮ ಪಂಚಾಯತಿಗಳನ್ನು ಪ್ರಗತಿಯ ಕಡೆಗೆ ತೆಗೆದುಕೊಂಡು ಹೋಗಬೇಕು ಎಂಬ ಆಶಯವನ್ನು ಹೊಂದಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಪ್ರಭಾರಿ ತಾ.ಪಂ. ಇಓ ರಾಮಕೃಷ್ಣಪ್ಪ, ಲೆಕ್ಕಾಧಿಕಾರಿ ಲಿಂಗರಾಜ್, ಸುನೀಲ್, ಕಿರಣ್ ಕುಮಾರ್, ಸಲೀಂ, ಮಂಜುನಾಥ್, ಆರ್.ಜಿ ಪೂಜಾ, ವಿನಾಯಕ, ಅರುಣ್ ವೀರೇಂದ್ರ ಪಾಟೀಲ್ ಇತರರು ಹಾಜರಿದ್ದರು.

# ಮೆಕ್ಕೆಜೋಳ ಬೆಳೆಯ ಚೇತರಿಕೆಗೆ ಲಘು ಪೋಷಕಾಂಶ ಸಿಂಪರಣೆ ಮಾಡಲು ಸಲಹೆ

ದಾವಣಗೆರೆ, ಆ.12- ಮಾಯಕೊಂಡ ಹಾಗೂ ಆನಗೋಡು ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಕ್ಷೇತ್ರ ಮಟ್ಟದ ಮುಸುಕಿನ ಜೋಳ ಬೆಳೆಯ ಚೇತರಿಕೆಗೆ ಲಘು ಪೋಷಕಾಂಶ ಸಿಂಪರಣೆ ಮಾಡಲು ಸಲಹೆ ನೀಡಲಾಗಿದೆ.

ಸಹಾಯಕ ಕೃಷಿ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಮಾತನಾಡಿ, ಅತಿಯಾದ ಮಳೆಯಿಂದಾಗಿ ಬಾಧಿತ ಮೆಕ್ಕೆಜೋಳ ಬೆಳೆಗಳ ಚೇತರಿಕೆಗೆ ಲಘುಪೋಷಕಾಂಶ ದ್ರಾವಣವನ್ನು 2.ಮಿ.ಲೀ ಹಾಗೂ 19 ಆಲ್‌ಮಿಶ್ರಣ 2 ಗ್ರಾಂ ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವಂತೆ ರೈತರಿಗೆ ಸಲಹೆ ನೀಡಿದರು. ಆನಗೋಡು ರೈತ ಸಂಪರ್ಕ ಕೇಂದ್ರದಲ್ಲಿ ಆನಗೋಡು ಹೋಬಳಿಯ ಕೃಷಿ ಸಖಿಯರಿಗೆ ಸಿಂಪರಣೆ ಕುರಿತು ತರಬೇತಿ ನೀಡಿ, ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರೈತರಿಗೆ ವ್ಯಾಪಕವಾಗಿ ಮಾಹಿತಿ ನೀಡುವಂತೆ ತಿಳಿಸಿದರು.

ತಾಲ್ಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಲಘುಪೋಷಕಾಂಶ ದ್ರಾವಣವನ್ನು ದಾಸ್ತಾನು ಇರಿಸಲಾಗಿದ್ದು, ರೈತರು ಇದರ ಸದುಪಯೋಗ ಪಡೆಯಲು ತಿಳಿಸಿದರು.

ಎರಡೂ ಹೋಬಳಿಗಳ ವ್ಯಾಪ್ತಿಯಲ್ಲಿ ತಡವಾಗಿ ಬಿತ್ತನೆ ಮಾಡಿದ ಹಾಗೂ ಅತಿ ಹೆಚ್ಚು ಮಳೆಯಿಂದಾಗಿ ಬಾಧಿತ ಮುಸುಕಿನ ಜೋಳ ಬೆಳೆಗಳನ್ನು ಪರಿಶೀಲಿಸಿ, ನಂತರ ಮಾಯಕೊಂಡ ಗ್ರಾಮದ ಶಿವಾನಂದಪ್ಪ ಇವರ ಜಮೀನಿನ ಮೆಕ್ಕೆಜೋಳದ ತಾಕಿನಲ್ಲಿ ಬೆಳೆಯ ಚೇತರಿಕೆಗಾಗಿ ಲಘುಪೋಷಕಾಂಶ ದ್ರಾವಣ ಹಾಗೂ 19 ಆಲ್ ಸಿಂಪರಣೆ ಮಾಡಿ ಶಿವಪುರ ಹಾಗೂ ಪವಾಡರಂಗವ್ವನಹಳ್ಳಿ ಗ್ರಾಮಗಳಲ್ಲಿ ಮಳೆಯಿಂದ ಬಾಧಿತ ಮೆಕ್ಕೆಜೋಳ ಬೆಳೆಗೆ ಚೇತರಿಕೆಗಾಗಿ ಸಿಂಪರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಾಯಕೊಂಡ ಹೋಬಳಿಯ ಕೃಷಿ ಸಮಾಜದ ಸದಸ್ಯರಾದ ರುದ್ರೇಶ್, ಕೃಷಿ ಅಧಿಕಾರಿಗಳಾದ ಕೇಶವನಾಯ್ಕ್, ಶ್ರೀನಿವಾಸ್ ಆರ್ ಹಾಗೂ ಇತರೆ ರೈತರುಗಳು ಹಾಜರಿದ್ದರು.




## ಹೊನ್ನಾಳಿಯಲ್ಲಿ ಇಂದು ಪ್ರತಿಭಟನೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಿಟ್ಟ ಎಸ್ ಸಿ ಪಿ ಮತ್ತು ಟಿ ಎಸ್ ಪಿ ಯ ಕೋಟ್ಯಾಂತರ ಹಣವನ್ನು ಜನಾಂಗದ ಪ್ರಗತಿಗೆ ಬಳಸದಿರುವ ರಾಜಕೀಯ ಪಕ್ಷಗಳ ಕ್ರಮ ಖಂಡಿಸಿ ಬಿಎಸ್‌ಪಿ ಇಂದು ಬೆಳಿಗ್ಗೆ 10 ಗಂಟೆಗೆ ಪ್ರತಿಭಟನೆಹಮ್ಮಿಕೊಂಡಿರುವುದಾಗಿ ಬಿಎಸ್ಪಿ ತಾಲೂಕು ಅಧ್ಯಕ್ಷ ಆರ್. ಕುಬೇರಪ್ಪ ತಿಳಿಸಿದ್ದಾರೆ. ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ತಾಲ್ಲೂಕು ಕಚೇರಿಯವರೆಗೆ ಪ್ರತಿಭಟನೆ ಹಮ್ಮಿಕೊಂಡಿದ್ದು, ಜನಾಂಗದ ಪ್ರಗತಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಳ್ಳುವ ಕ್ರಮ ಖಂಡಿಸಿ ಹೋರಾಟ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

## ಇಂದು ಸನ್ಮಾನ

ದಾವಣಗೆರೆ ಸೃಷ್ಟಿ ಕಬಡ್ಡಿ ಅಕಾಡೆಮಿ ವತಿಯಿಂದ ಇಂದು ಸಂಜೆ 5.30 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹಾಗೂ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ಬಾಂಗ್ಲಾ ದೇಶದ ಹಿಂದೂಗಳ ರಕ್ಷಣೆಗೆ ಆಗ್ರಹ

## ಹರಿಹರದಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ಮತ್ತು ಬಿಜೆಪಿ ಪ್ರತಿಭಟನೆ




ಹರಿಹರ, ಅ.12- ಬಾಂಗ್ಲಾ ಹಿಂದೂಗಳ ಸುರಕ್ಷತೆಗೆ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಹಿಂದೂ ಹಿತರಕ್ಷಣಾ ಸಮಿತಿ ಮತ್ತು ತಾಲ್ಲೂಕು ಬಿಜೆಪಿ ವತಿಯಿಂದ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಕ್ಕೀರಸ್ವಾಮಿ ಮಠದ ಮುಂಭಾಗದಿಂದ ಆರಂಭ ಗೊಂಡ ಪ್ರತಿಭಟನಾ ಮೆರವಣಿಗೆ ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಗಾಂಧಿ ವೃತ್ತದ ಮೂಲಕ ಸಂಚರಿಸಿ ತಹಶೀಲ್ದಾರ್ ಕಚೇರಿಗೆ ತೆರಳಿದ ಪ್ರತಿಭಟನಾಕಾರರು ತಹಶೀಲ್ದಾರ್ ಪುಷ್ಪಾವತಿ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ಮುಖಂಡ ಹನಗವಾಡಿ ಎಸ್.ಎಂ. ವೀರೇಶ್, ರಾಜನಹಳ್ಳಿ ಶಿವಕುಮಾರ್, ಚಂದ್ರಶೇಖರ್ ಪೂಜಾರ್ ಮಾತನಾಡಿ, ನೆರೆಯ ಬಾಂಗ್ಲಾದೇಶ ತೀವ್ರ ಹಿಂಸಾಚಾರದಿಂದ ಬಳಲು ತ್ತಿದ್ದು, ಚುನಾಯಿತ ಪ್ರಧಾನಿ ರಾಜೀನಾಮೆ ನೀಡಿ ದೇಶವನ್ನು ತೊರೆದ ನಂತರ ಅಲ್ಲಿಯ ಕಾನೂನು ಸುವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯವಾಗಿದೆ. ಈ ಗೊಂದಲಮಯ ಪರಿಸ್ಥಿತಿಯಲ್ಲಿ ಅಲ್ಲಿನ ತೀವ್ರಗಾಮಿ ಜಿಹಾದಿ ಶಕ್ತಿಗಳು ಹಿಂದೂ ಸಮುದಾಯದ ಜನರ ಮೇಲೆ ಮತ್ತು ಅವರುಗಳ ಮನೆಯ ಮೇಲೆ ದೊಡ್ಡ ಪ್ರಮಾಣದಲ್ಲಿ ದಾಳಿ ಯನ್ನು ಪ್ರಾರಂಭಿಸಿ ಹಿಂಸೆಯನ್ನು ನೀಡುತ್ತಿದ್ದಾರೆ.

ಹಿಂದೂ ಧಾರ್ಮಿಕ ಸ್ಥಳಗಳು, ವ್ಯಾಪಾರಿ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ. ವಿಭಜನೆಯ ಸಮಯದಲ್ಲಿ ಬಾಂಗ್ಲಾದೇಶದಲ್ಲಿ ಶೇ. 32 ರಷ್ಟು ಇದ್ದ ಹಿಂದೂಗಳ ಜನಸಂಖ್ಯೆ ಈಗ ಶೇ. 8ಕ್ಕಿಂತಲೂ ಕಡಿಮೆಯಾಗಿದೆ. ಬಾಂಗ್ಲಾದೇಶದ ಹಿಂದೂಗಳ ಸುರಕ್ಷತೆಗಾಗಿ ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು ವಿಶ್ವ ಸಮುದಾಯದ ಜವಾಬ್ದಾರಿ ಆಗಿದೆ ಎಂದು ಹೇಳಿದರು.


ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ ಹೊಸ ಸರ್ಕಾರ ಅಲ್ಲಿನ ಹಿಂದೂಗಳಿಗೆ ರಕ್ಷಣೆ ಕೊಡಬೇಕು ಹಾಗೂ ದಾಳಿಯಿಂದ ನಾಶಗೊಂಡಿರುವ ಹಿಂದೂಗಳ ಮನೆಗಳನ್ನು ಪುನರ್ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಡಾ. ಖಮಿತ್ಕರ್, ನಿವೃತ್ತ ಶಿಕ್ಷಕ ಕೃಷ್ಣಮೂರ್ತಿ ಶೆಟ್ಟಿ, ಬಾತಿ ಚಂದ್ರಶೇಖರ್, ತುಳಜಪ್ಪ ಭೂತೆ, ಹೆಚ್. ದಿನೇಶ್, ಹೆಚ್.ಎಸ್. ರಾಘವೇಂದ್ರ, ರಾಜು ರೋಖಡೆ, ಪರಶುರಾಮ್ ಕಾಟ್ವೆ, ಹೆಚ್. ಮಂಜಾನಾಯ್ಕ್, ಗಿರೀಶ್ ಗೌಡ, ವಾಸು ಚಂದಪೂರ್, ಬೆಣ್ಣೆ ಸಿದ್ದೇಶ್, ಚಂದ್ರಕಾಂತ್ ಗೌಡ, ಹರೀಶ್ ಶಿವಪ್ರಸಾದ್, ಸ್ವಾತಿ ಹನುಮಂತಪ್ಪ, ಸುನಿಲ್, ಸಂತೋಷ್ ಗುಡಿಮನಿ, ಕಿರಣ್, ರವಿ ತಾವರಗಿ, ಮಹಾಂತೇಶ್, ಪ್ರಶಾಂತ್, ಪ್ರಮೀಳಾ ನಲ್ಲೂರು, ರೂಪಾ ಕಾಟ್ವೆ, ಅಂಬುಜಾ ರಾಜೊಳ್ಳಿ, ರಶ್ಮಿ ಮೆಹರ್ವಾಡೆ, ಸಂತೋಷಿ ಮೋಹಿತೆ, ಸಾಕ್ಷಿ, ಆಶಾ ಕುಂಟೆ, ರೂಪಾ, ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಹರ್ ಘರ್ ತಿರಂಗಾ ಬೈಕ್ ರ್‍ಯಾಲಿ

ಕೇಂದ್ರ ಸರ್ಕಾರದ ಆದೇಶದನ್ವಯ 'ಹರ್ ಘರ್ ತಿರಂಗಾ' ಪ್ರತಿ ಮನೆಯ ಮೇಲೆ ರಾಷ್ಟ್ರ ಧ್ವಜ ಹಾರಿಸಲು ಜನರಲ್ಲಿ ಜಾಗೃತೆ ಮೂಡಿಸಲು ಸರ್ಕಾರದ ಎಲ್ಲ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಇಂದು ಬೆಳಿಗ್ಗೆ ನಗರದಲ್ಲಿ ಬೈಕ್ ರ್‍ಯಾಲಿ ನಡೆಸುವರು. ಅನುದಾನಿತ ಹಾಗೂ ಅನುದಾನರಹಿತ ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಹಶಿಲ್ದಾರ್ ತಿಳಿಸಿದ್ದಾರೆ.


## ಪುಣ್ಯಸ್ಮರಣೆ



ದಿ|| ಶ್ರೀ ಎಸ್. ಚಂದ್ರಶೇಖರಪ್ಪ
ಜನನ : 04.01.1939 - ನಿಧನ : 13.08.2023
ಪ್ರಥಮ ವರ್ಷದ ಪುಣ್ಯಸ್ಮರಣೆ

ದಿ|| ಶ್ರೀಮತಿ ಎಸ್.ಸಿ. ಮಂಜುಳ
ಜನನ : 24.03.1954 - ನಿಧನ : 28.01.2017
ಏಳನೇ ವರ್ಷದ ಪುಣ್ಯಸ್ಮರಣೆ

*ನಮ್ಮೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕರಾಗಿ ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಅಜರಾಮರ... ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವವರು :*

ಶ್ರೀಮತಿ ಸ್ಮಿತಾ ಡಾ|| ಎಸ್.ಸಿ. ಚಿದಾನಂದ
ಶ್ರೀಮತಿ ಗಂಗಾ ಶ್ರೀ ಎಸ್.ಸಿ. ನಾಗರಾಜ್
ಶ್ರೀಮತಿ ಸಹನ ಶ್ರೀ ರಾಜೀವ್ ಮತ್ತು ಮೊಮ್ಮಕ್ಕಳು
ಶುಂಠಿ ವಂಶಸ್ಥರು ಹಾಗೂ ಬಂಧು-ಮಿತ್ರರು
ಆಗ್ರೋ ಸೀಡ್ಸ್ ಕಾರ್ಪೊರೇಷನ್, ಆಗ್ರೋ ಸೀಡ್ಸ್ ಕಂಪನಿ,
ಅನನ್ಯ ಎಂಟರ್‌ಪ್ರೈಸಸ್, ದಾವಣಗೆರೆ. ಮೊ. : 98454 720273


## ಭಾನುವಳ್ಳಿಗೆ ತಲುಪದ ಭದ್ರಾ ನೀರು ಒಣಗಲು ಆರಂಭಿಸಿದ ಮೆಕ್ಕೆಜೋಳ



ಮಲೇಬೆನ್ನೂರು, ಆ. 12 - ಭಾನುವಳ್ಳಿ ಗ್ರಾಮದ ಜಮೀನುಗಳಲ್ಲಿ ಬೆಳೆದಿರುವ ನೂರಾರು ಎಕರೆ ಮೆಕ್ಕೆಜೋಳದ ಬೆಳೆ ಮಳೆ ಇಲ್ಲದೆ ಮತ್ತು ಕಾಲುವೆಯಲ್ಲಿ ನೀರು ಬಾರದ ಕಾರಣ ಒಣಗಲು ಆರಂಭಿಸಿದ್ದು, ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ಭದ್ರಾ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಕಾಲುವೆ ನೀರು ಈ ಕ್ಷಣದವರೆಗೂ ನಮ್ಮ ಭಾಗಕ್ಕೆ ಬಂದಿಲ್ಲ ಎಂದು ಗ್ರಾಮದ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮಳೆ ಆಶ್ರಿತ ಜಮೀನುಗಳಲ್ಲಿ ಬೆಳೆದಿರುವ ಮೆಕ್ಕೆಜೋಳವೂ ಮಳೆ ಇಲ್ಲದೆ ಬತ್ತಲು ಆರಂಭಿಸಿದೆ.


## ಚಿರಸ್ಮರಣೆ



ದಿ|| ನೀಲಗುಂದ ಸಿದ್ದರಾಮಣ್ಣ
ಜನನ : 1904, ಲಿಂಗೈಕ್ಯ : 1979 (ದಿ. 13.08.79) 46ನೇ ವರ್ಷ
ದಿ|| ಚನ್ನಮ್ಮ ಸಿದ್ದರಾಮಣ್ಣ ನೀಲಗುಂದ
ಜನನ : 1914, ಲಿಂಗೈಕ್ಯ : 1998 (ದಿ. 31.07.98) 27ನೇ ವರ್ಷ

ನಿಮ್ಮ ನೆನಪೇ ಚೈತನ್ಯದಾಯಕ. ತಾವು ಹಾಕಿಕೊಟ್ಟ ದಾರಿಯಲ್ಲೇ ಮುನ್ನಡೆಯುತ್ತಿರುವ... ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ನೀಲಗುಂದ ಬಂಧುಗಳು.


## ಪ್ರಭಾಕರ (ಡಾಬು) ನಿಧನ



ದಾವಣಗೆರೆ ಕೆಟಿಜೆ ನಗರ ವಾಸಿ (ಡಾಂಗೆ ಪಾರ್ಕ್ ಹತ್ತಿರ) ಪ್ರಭಾಕರ (ಡಾಬು) (50) ಇವರು ದಿನಾಂಕ 12.8.2024ರ ಸೋಮವಾರ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.8.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ಲೇಬರ್ ಕಾಲೋನಿಯ ಆರ್.ಎಚ್. ಬೃಂದಾವನದಲ್ಲಿ ನೆರವೇರಲಿದೆ.

## ಸುಮಾ ಅಂಜನ್ ಕುಮಾರ್ ನಿಧನ



ದಾವಣಗೆರೆ ಡೋರ್ ನಂ. 349/2, ದೀಕ್ಷಿತ್ ರಸ್ತೆ ವಾಸಿ ದಿ. ಅಂಜನ್ ಕುಮಾರ್ ಇವರ ಧರ್ಮಪತ್ನಿ ಸುಮಾ ಅಂಜನ್ ಕುಮಾರ್ (62) ಇವರು ದಿನಾಂಕ 12.8.2024ರ ಸೋಮವಾರ ರಾತ್ರಿ 11.51ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.8.2024ರ ಮಂಗಳವಾರ ಮಧ್ಯಾಹ್ನ 1ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.


## 24 ರಂದು ಬಿ.ಕಾಂ. ಪರೀಕ್ಷೆ

ದಾವಣಗೆರೆ ಆ. 12 - ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದ್ದ ಸ್ನಾತಕ ಬಿ.ಕಾಂ (ಎನ್‌ಇಪಿ) ಪದವಿಯ ಇ-ಕಾಮರ್ಸ್ ವಿಷಯದ ಪರೀಕ್ಷೆಯನ್ನು ಇದೇ ದಿನಾಂಕ 24 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ನಡೆಸಲಾಗುವುದು ಎಂದು ದಾವಣಗೆರೆ ವಿಶ್ವವಿದ್ಯಾನಿಲಯ ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ. ರಮೇಶ್ ತಿಳಿಸಿದ್ದಾರೆ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು.12- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ. ಮಾಹಿತಿಗೆ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

## ಅಪರಿಚಿತ ಯುವಕನ ಶವ ಪತ್ತೆ



ದಾವಣಗೆರೆ, ಆ. 12 - ಇಲ್ಲಿಗೆ ಸಮೀಪದ ಆಲೂರುಹಟ್ಟಿ ಗ್ರಾಮದಿಂದ ಕರೆತಂದ ಅನಾಮಧೇಯ ವ್ಯಕ್ತಿ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಸುಮಾರು 30 ರಿಂದ 40 ವರ್ಷ ವಯಸ್ಸಾಗಿದ್ದು, ಕಪ್ಪು ಕೂದಲು, ಮೀಸೆ ಗಡ್ಡ ಇದೆ. ಮೇಲ್ಭಾಗದ ಒಂದು ಹಲ್ಲು ಮುರಿದಿರುತ್ತದೆ. ಬ್ರೌನ್ ಬಣ್ಣದ ಲೋಯರ್, ಹಳದಿ ಬಣ್ಣದ ಚಡ್ಡಿ ಧರಿಸಿರುತ್ತಾನೆ. ಸಂಬಂಧಪಟ್ಟವರು ಗ್ರಾಮಾಂತರ ಪೊಲೀಸ್ ಠಾಣೆ 08192 262555, 08192 253100, 9480803256, ಗೆ ಸಂಪರ್ಕಿಸಬಹುದು.

## ಹಳೇಬಾತಿಯಲ್ಲಿ ಅಪರಿಚಿತ ಶವ ಪತ್ತೆ



ದಾವಣಗೆರೆ, ಆ. 12 - ಹಳೇಬಾತಿ ಗ್ರಾಮದ ಎನ್.ಹೆಚ್. 48ರ ಸರ್ವೀಸ್ ರಸ್ತೆಯಲ್ಲಿ ಅಪರಿಚಿತ ಗಂಡಿಸಿನ ಮೃತ ದೇಹ ಪತ್ತೆಯಾಗಿದೆ. ಸುಮಾರು 40 ರಿಂದ 45 ವರ್ಷ ವಯಸ್ಸಿನ ಈತನಿಗೆ ಕಪ್ಪು ಮಿಶ್ರಿತ ಬಿಳಿ ಕೂದಲು, ಮೀಸೆ ಗಡ್ಡ ಇದೆ. ಬಲಗೈಯಲ್ಲಿ ಓಂಕಾರದ ಚಿತ್ರ ಹಾಗೂ ಎಬಿ ಹಚ್ಚೆ ಇರುತ್ತದೆ. ಬೂದು ಬಣ್ಣದ ಹಾಪ್ ಪ್ಯಾಂಟ್ ಧರಿಸಿದ್ದು, ಮಾಹಿತಿ ದೊರಕಿದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ 08192 262555, 08192 253100, 9480803256, ಗೆ ಸಂಪರ್ಕಿಸಬಹುದು.

# ನಿವೃತ್ತಿ ನಂತರ ಉದ್ಯೋಗಿಗಳ ಜನ್ಮದಿನ ಬದಲಾವಣೆ ಮಾಡಲಾಗದು : ಹೈಕೋರ್ಟ್

ಬೆಂಗಳೂರು, ಆ. 12 - ಉದ್ಯೋಗಿಯೊಬ್ಬರು ನಿವೃತ್ತಿಯ ನಂತರ ತಮ್ಮ ಜನ್ಮ ದಿನದ ದಾಖಲೆ ಬದಲಿಸಲು ಸಾಧ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿದೆ.

1983 ರಲ್ಲಿ ವ್ಯಕ್ತಿಯೊಬ್ಬರು ಸಂಸ್ಕರಣಾ ಘಟಕವೊಂದರಲ್ಲಿ ಉದ್ಯೋಗಿಯಾಗಿ ಸೇರಿದ್ದರು. 2006ರಲ್ಲಿ ಅವರು ನಿವೃತ್ತರಾಗಿದ್ದರು. ಕೆಲಸಕ್ಕೆ ಸೇರುವ ವೇಳೆ ತಮ್ಮ ಜನ್ಮದಿನ ಮಾರ್ಚ್ 30, 1952 ಎಂದು ಮೌಖಿಕವಾಗಿ ತಿಳಿಸಿದ್ದರು. ಆದರೆ ಇದಕ್ಕೆ ಯಾವುದೇ ದಾಖಲೆ ಒದಗಿಸಿರಲಿಲ್ಲ.

ಆದರೆ ಕಂಪನಿಯು ಭವಿಷ್ಯ ನಿಧಿ ವಿವರ ಹಾಗೂ ಶಾಲಾ ಪ್ರಮಾಣ ಪತ್ರ ಆಧರಿಸಿ ಅವರ ಜನ್ಮದಿನವನ್ನು ಮಾರ್ಚ್ 10, 1948 ಎಂದು ನಮೂದಿಸಿತ್ತು. ಇದರಿಂದಾಗಿ ಅವರು 58 ವರ್ಷವಾಗಿದ್ದಾಗ 2006ರಲ್ಲಿ ನಿವೃತ್ತರಾಗಿದ್ದರು.

ನಿವೃತ್ತಿಯ ನಂತರ ವ್ಯಕ್ತಿ ತಮ್ಮ ಜನ್ಮ ದಿನ ಮಾರ್ಚ್ 30, 1952 ಎಂಬ ಪ್ರಮಾಣ ಪತ್ರ ಪಡೆದಿದ್ದರು. ತಮ್ಮನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು ಇಲ್ಲವೇ 2010ರ ವರೆಗಿನ ಲಾಭಗಳನ್ನು ತಮಗೆ ನೀಡಬೇಕು ಎಂದು ಅವರು ಕಂಪನಿ ಬಳಿ ಕೇಳಿದ್ದರು.

ಈ ಮನವಿ ತಳ್ಳಿ ಹಾಕಿದ್ದ ಕಂಪನಿಯು, ತಾನು ನಮೂದಿಸಿಕೊಂಡಿರುವ ಜನ್ಮದಿನಾಂಕ ಸರಿಯಾಗಿದೆ ಹಾಗೂ ನಿವೃತ್ತಿಯ ಸಮಯದಲ್ಲಿ ಯಾವುದೇ ಆಕ್ಷೇಪಣೆ ಇಲ್ಲದೆ ಲಾಭಗಳನ್ನು ಪಡೆಯಲಾಗಿತ್ತು ಎಂದು ತಿಳಿಸಿತ್ತು. ನಂತರ ವ್ಯಕ್ತಿ ಕಾರ್ಮಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಕಾರ್ಮಿಕ ನ್ಯಾಯಾಲಯ ಮನವಿ ತಳ್ಳಿ ಹಾಕಿದ ನಂತರ, ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್, ನಿವೃತ್ತಿಯಾದ ಎರಡು ವರ್ಷಗಳ ನಂತರ ವ್ಯಕ್ತಿ ಅರ್ಜಿ ದಾಖಲಿಸಿದ್ದಾರೆ. ಇದು ಅವರ ಮನವಿಯ ಬಗ್ಗೆ ಅನುಮಾನ ಹುಟ್ಟಿಸುತ್ತದೆ ಎಂದು ಹೇಳಿದರು.

ನಿವೃತ್ತಿಯ ನಂತರ ಜನ್ಮ ದಿನಾಂಕದಲ್ಲಿ ಬದಲಾವಣೆ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ತೀರ್ಪು ನೀಡಿದೆ. ಅಲ್ಲದೆ ಈ ಹಿಂದೆ ದಾಖಲೆಗಳನ್ನು ಬದಲಾಯಿಸಲು ಅವಕಾಶ ಇತ್ತು, ಆದರೂ ಅದನ್ನು ಬಳಸಿಕೊಂಡಿರಲಿಲ್ಲ ಎಂದು ಹೈಕೋರ್ಟ್ ಹೇಳಿದೆ.

# ಈ ಬಾರಿ ಅದ್ದೂರಿ ದಸರಾ ಆಚರಣೆ

ಬೆಂಗಳೂರು, ಆ. 12 - ರಾಜ್ಯಾದ್ಯಂತ ಉತ್ತಮ ಮಳೆಯಾಗಿ ಜಲಾಶ ಯಗಳೂ ಭರ್ತಿ ಆಗಿರುವ ಹಿನ್ನೆಲೆಯಲ್ಲಿ ಈ ಬಾರಿ ವಿಶ್ವವಿಖ್ಯಾತ ಮೈಸೂರು ದಸರಾವನ್ನು ಅದ್ದೂರಿಯಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ.

ವಿಧಾನಸೌಧದ ಸಮ್ಮೇಳನ ಸಭಾಂ ಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಉತ್ತಮ ಮಳೆಯಿಂದಾಗಿ ರೈತರು ಹಸನ್ಮುಖರಾಗಿದ್ದು, ಕುಡಿಯುವ ನೀರಿಗೂ ಸಮಸ್ಯೆ ಎದುರಾಗದು. ಈ ಹಿನ್ನೆಲೆಯಲ್ಲಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ದಸರಾ ಆಚರಿಸೋಣ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಕಳೆದ ವರ್ಷ ರಾಜ್ಯದಲ್ಲಿ ಬರಗಾಲ ಇದ್ದಿದ್ದರಿಂದ ಸರಳ ದಸರಾ ಆಚರಿಸಲಾಯಿತು. ಆ ಸಮಯದಲ್ಲೂ 30 ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ ಬಾರಿ ಅದ್ದೂರಿ ಸಂಭ್ರಮಕ್ಕೆ ಎಷ್ಟು ಹಣ ಅಗತ್ಯವಿದೆಯೋ ಅದನ್ನು ದಸರಾ ಸಮಿತಿ ತೀರ್ಮಾನಿಸಿ ವರದಿ ನೀಡಿದರೆ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ಅಕ್ಟೋಬರ್ 3ರಿಂದ 12 ರವರೆಗೆ ದಸರಾ ಮಹೋತ್ಸವ ನಡೆಯಲಿದ್ದು ಮೊದಲ ದಿನ ಬೆಳಗ್ಗೆ 9 ಗಂಟೆ 10 ನಿಮಿಷಕ್ಕೆ ತಾಯಿ ಚಾಮುಂಡಿ ದೇವಿಗೆ ಪೂಜೆ ಸಲ್ಲಿಸಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. ಅಕ್ಟೋಬರ್ 12ರಂದು ಮಧ್ಯಾಹ್ನ 2 ಗಂಟೆ 10 ನಿಮಿಷಕ್ಕೆ ಅರಮನೆ ಆವರಣದಿಂದ ಜಂಬೂ ಸವಾರಿ ಹೊರಡಲಿದೆ.

ಈ ಬಾರಿಯ ದಸರಾ ಉದ್ಘಾಟನೆಯನ್ನು ಯಾರಿಂದ ಮಾಡಿಸಬೇಕೆಂಬ ಬಗ್ಗೆ ಇಂದಿನ ಸಭೆಯಲ್ಲಿ ಯಾವುದೇ ತೀರ್ಮಾನವಾಗಲಿಲ್ಲ, ಮುಂದಿನ ದಿನಗಳಲ್ಲಿ ಸಮಿತಿ ನಿರ್ಧರಿಸಲಿದೆ.

## ಹಿರಿಯ ಬಸವ ತತ್ವ ಪಾಲಕ ಶತಾಯುಷಿ ಸಿದ್ರಾಮಣ್ಣ ಇನ್ನಿಲ್ಲ

(1ನೇ ಪುಟದಿಂದ) ದಿನಾಂಕ 13ರ ಮಂಗಳವಾರ ಬೆಳಿಗ್ಗೆ 9 ರವರೆಗೆ ಇಡಲಾಗುವುದು. ನಂತರ ಮಧ್ಯಾಹ್ನ 1.30ಕ್ಕೆ ಹರಪನಹಳ್ಳಿ ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಬಸವ ಬಳಗದ ಅಗಡಿ ಮಹಾಂತೇಶ್ ತಿಳಿಸಿದ್ದಾರೆ. ಹತ್ತು ವರ್ಷಗಳ ಕಾಲ ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಅನುಭವ ಮಂಟಪದ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದ ಸಿದ್ದರಾಮಣ್ಣ, ನಂತರ ದಾವಣಗೆರೆ ಬಸವ ಬಳಗದಲ್ಲಿದ್ದರು. ರಾಜ್ಯ ಮಾತ್ರವಲ್ಲದೇ, ದೇಶದ ವಿವಿಧ ಭಾಗಗಳಲ್ಲಿ ಬಸವ ತತ್ವ ಕುರಿತು ಪ್ರವಚನ ನೀಡುತ್ತಿದ್ದರು. ಕಲ್ಯಾಣ ಕ್ರಾಂತಿ, ಶರಣರ ಕುರಿತು ಹತ್ತಾರು ಗ್ರಂಥಗಳನ್ನು ರಚಿಸಿದ್ದರು.

# ವಿಶೇಷ ಗುಣವುಳ್ಳ ತೋಟಗಾರಿಕಾ ಬೆಳೆಗಳ ಬಿಡುಗಡೆ



### ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶೇಷ ಕಾರ್ಯಕ್ರಮ

ದಾವಣಗೆರೆ, ಆ. 12- ಭಾರತೀಯ ಕೃಷಿ ಅನುಸಂಧಾನ ಪರಿಷತ್ ನವದೆಹಲಿ ಇವರ ವತಿಯಿಂದ 109 ಹವಾಮಾನ ವೈಪರೀತ್ಯಕ್ಕೆ ಸ್ಥಿತಿ ಸ್ಥಾಪಕತ್ವ ಉಳ್ಳ ಬೆಳೆ ತಳಿಗಳನ್ನು ಪ್ರಧಾನಿ ನರೇಂದ್ರ ಮೋದಿ ಇವರ ಅಮೃತ ಹಸ್ತದಿಂದ ಬಿಡುಗಡೆಗೊಳಿಸಿದ ಸಂದರ್ಭದಲ್ಲಿ ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶೇಷ ಕಾರ್ಯಕ್ರಮವನ್ನು ರೈತರಿಗೋಸ್ಕರ ಹಮ್ಮಿಕೊಳ್ಳಲಾಗಿತ್ತು.

ವಿಶೇಷ ಗುಣಗಳುಳ್ಳ 69 ಕೃಷಿ ಬೆಳೆಗಳು ಹಾಗೂ ನಲವತ್ತು ತೋಟಗಾರಿಕಾ ಬೆಳೆಗಳು ರೈತರ ಆದಾಯ, ಆರೋಗ್ಯ ಹಾಗೂ ಆನಂದಕ್ಕಾಗಿ ಬಿಡುಗಡೆಗೊಂಡವು.

ಪ್ರಸ್ತುತ ಬಿಡುಗಡೆಗೊಂಡಿರುವ ನೂತನ ತಳಿಗಳು ಗ್ರಾಮೀಣ ಕ್ಷೇತ್ರದಲ್ಲಿ ಇರುವ ಪೋಷಕಾಂಶಗಳ ಕೊರತೆಯನ್ನು ಕಡಿಮೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. 23 ದವಸ ಧಾನ್ಯಗಳು, 11 ಬೇಳೆ ಕಾಳುಗಳು, 7 ಎಣ್ಣೆ ಕಾಳುಗಳು, ಏಳು ಮೇವಿನ ಬೆಳೆಗಳು 4 ಕಬ್ಬಿನ ತಳಿಗಳು, 6 ರೇಷ್ಮೆ ತಳಿಗಳು, 11 ಹವಾಮಾನ ವೈಪರೀತ್ಯಕ್ಕೆ ಸ್ಥಿತಿಸ್ಥಾಪಕತ್ವವುಳ್ಳ ಬೆಳೆಗಳು, 8 ಹಣ್ಣುಗಳು, 8 ತರಕಾರಿಗಳು, ಮೂರು ಗೆಡ್ಡೆ ಗೆಣಸುಗಳು, 6 ಸಾಂಬಾರ ತಳಿಗಳು, 6 ಮರದ ಬೆಳೆ ತಳಿಗಳು, 5 ಹೂವಿನ ತಳಿಗಳು, 4 ಔಷಧೀಯ ಸಸ್ಯಗಳು, ಹೀಗೆ 109 ನೂತನ ಬೆಳೆ ತಳಿಗಳು ಕೃಷಿ ಕ್ಷೇತ್ರವನ್ನು ಅತ್ಯಂತ ವಿಶಿಷ್ಟವಾಗಿಸಲಿವೆ.

ಇವುಗಳಲ್ಲಿ 13 ತಳಿಗಳು ನಮ್ಮ ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಿಂದ ಅಭಿವೃದ್ಧಿ ಆಗಿರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಅರ್ಕ ಉದಯ್ ಎಂಬ ಮಾವಿನ ತಳಿ ಕ್ಯಾರೋಟಿನಾಯ್ಡ್ ಅಂಶ ಹೆಚ್ಚು ಉಳ್ಳದ್ದಾಗಿದೆ. ಇದು ಜುಲೈ ತಿಂಗಳಲ್ಲಿ ಮಾರುಕಟ್ಟೆಗೆ ಬರುವುದರಿಂದ ಒಳ್ಳೆಯ ಬೆಲೆ ಕೂಡ ಇದಕ್ಕೆ ಸಿಗುತ್ತದೆ. ಅರ್ಕ ಕಿರಣ್ ಎಂಬ ಪೇರಲೆ ಹಣ್ಣಿನ ಬೆಳೆ ಲೈಕೋಪಿನ್ ಅಂಶ ಅಧಿಕವಾಗಿ ಉಳ್ಳದ್ದಾಗಿ ಕೆಂಪು ವರ್ಣದಿಂದ ಕೂಡಿದ್ದು ಒಳ್ಳೆಯ ಮಾರುಕಟ್ಟೆ ಬೆಲೆ ಸಿಗಲಿದೆ.

ಅರ್ಕ ವೈಭವ್ ಎಂಬ ಟ್ಯೂಬರೋಸ್ ಎಂಬ ಹೂವಿನ ಬೆಳೆ ಎರಡು ದಳಗಳಿಂದ ಕೂಡಿದ್ದು ವಿಶೇಷವಾಗಿ ಮಾರುಕಟ್ಟೆಯಲ್ಲಿ ದೊರೆಯಲಿದೆ. ಅರ್ಕಾ ಶ್ರೀಯ ಎಂಬ ಸುಗಂಧರಾಜ ಹೂವಿನ ತಳಿ ಕಡು ಕಿತ್ತಳೆ ಬಣ್ಣದಿಂದ ಕೂಡಿದ್ದು ಹೆಚ್ಚಿನ ಬೆಲೆ ಪಡೆಯಲಿದೆ. ಅರ್ಕ ಅಮರ್ ಎಂಬ ಗ್ಲಾಡಿಯೋಲಸ್ ಹೂವಿನ ತಳಿ ಹೆಚ್ಚು ಇಳುವರಿ ನೀಡಲಿದೆ ಅರ್ಕ ನಿಕಿತಾ ಎಂಬ ಹೈಬ್ರಿಡ್ ಬೆಂಡೆ ಬೆಳೆ ಅಯೋಡಿನ್ ಅಂಶ ಅಧಿಕ ಉಳ್ಳದ್ದಾಗಿದೆ ಹಾಗೂ ಹಳದಿ ಮುಜಾಯಿಕ್ ವೈರಸ್‌ಗೆ ನಿರೋಧಕ ಶಕ್ತಿ ಇರುತ್ತದೆ.

ಅರ್ಕ ವಿಸ್ತಾರ ಎಂಬ ಡಾಲಿಕೋಸ್ ಅವರೆ ಬೆಳೆ ಹೆಚ್ಚು ಇಳುವರಿ ನೀಡಲಿದೆ. ಅರ್ಕ ಧನ್ವಂತರಿ ಹಾಗೂ ಅರ್ಕ ದಕ್ಷ ಎಂಬ ಹಸಿರೆಲೆ ಗೊಬ್ಬರದ ಬೆಳೆಗಳು ಔಷಧೀಯ ಗುಣಗಳಿಂದ ಕೂಡಿದ್ದು ಎಲ್ ಡೋಪ ಎಂಬ ಅಂಶವು ಅಧಿಕವಾಗಿರುತ್ತದೆ. ಅರ್ಕ ಅಶ್ವಗಂಧ ಹಾಗೂ ಅರ್ಕ ಪ್ರಭಾವಿ ಔಷಧೀಯ ತಳಿಗಳು ರೋಗನಿರೋಧಕ ಶಕ್ತಿಯನ್ನು ನಮ್ಮಲ್ಲಿ ಹೆಚ್ಚು ಮಾಡಲಿವೆ.

ಹೀಗೆ ವೈವಿಧ್ಯಮಯ ಶಕ್ತಿ ಸಾಮರ್ಥ್ಯಗಳುಳ್ಳ ನವೀನ ಬೆಳೆ ತಳಿಗಳು ಕೃಷಿ ಕ್ಷೇತ್ರವನ್ನು ಆವರಿಸಿದ್ದು ಇವುಗಳ ಪ್ರಾತ್ಯಕ್ಷಿಕೆಯನ್ನು ತರಳಬಾಳು ಜಗದ್ಗುರುಗಳ ಮಾರ್ಗದರ್ಶನ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಇವರ ತಾಂತ್ರಿಕ ಸಹಯೋಗದಲ್ಲಿ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆಯ ಕ್ಷೇತ್ರಗಳಲ್ಲಿ ಸದ್ಯದಲ್ಲೇ ಕೈಗೊಳ್ಳಲಾಗುವುದು.

ಮಳೆಯಾಶ್ರಿತ ಪ್ರದೇಶಗಳಿಗೆ ಸೂಕ್ತವಾಗಿರುವ ಒಣ ಕೂರಿಗೆ ಭತ್ತ ಪದ್ಧತಿಯನ್ನು ಈಗಾಗಲೇ ಶ್ರೀ ತರಳಬಾಳು ಸ್ವಾಮೀಜಿಯವರು ಪ್ರಾತ್ಯಕ್ಷಿಕೆ ಮಾಡಿ ತೋರಿಸಿದ್ದಾರೆ. ಹೆಚ್ಚಿನ ಸಂಶೋಧನೆಯನ್ನು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಜೈನ್ ಇರಿಗೇಶನ್ ಸಂಸ್ಥೆಯ ಸಹಯೋಗದೊಂದಿಗೆ ಮಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರು ವಿಜ್ಞಾನಿಗಳು, ನಾಗರಿಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಸಿರಿಗೆರೆ ಜಗದ್ಗುರುಗಳು ನಿರ್ಮಿಸಿರುವ ಕೃಷಿ ವಿಜ್ಞಾನ ಕೇಂದ್ರ ಜಿಲ್ಲೆಯ ರೈತರ ಆತ್ಮೀಯ ಒಡನಾಡಿ



ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಆಶಯದಂತೆ ಕೃಷಿ ವಿಜ್ಞಾನ ಕೇಂದ್ರವು ಕೇಂದ್ರ ಸರ್ಕಾರದ ಪ್ರತಿಷ್ಠಿತ ಹವಾಮಾನ ವೈಪರೀತ್ಯಕ್ಕೆ ಚೇತರಿಕೆಯುಕ್ತ ಕೃಷಿ ತಂತ್ರಜ್ಞಾನಗಳ ಯೋಜನೆಯನ್ನು ಹತ್ತು ವರ್ಷಗಳ ಕಾಲ ಸಿದ್ದನೂರು, ಪವಾಡ ರಂಗವ್ವನಹಳ್ಳಿ, ಅಗಸನಕಟ್ಟೆ ಗ್ರಾಮಗಳಲ್ಲಿ ಪರಿಣಾಮಕಾರಿ ಯಾಗಿ ಅನುಷ್ಠಾನಗೊಳಿಸಲಾಗಿತ್ತು.

ಈ ಗ್ರಾಮಗಳಿಂದ ಸುಮಾರು 500 ಕುಟುಂಬಗಳಿಗೆ ಹವಾಮಾನ ವೈಪರೀತ್ಯಕ್ಕೆ ಸ್ಥಿತಿಸ್ಥಾಪಕತೆ ಉಳ್ಳ ಬೆಳೆ ತಳಿಗಳ ಪರಿಚಯವನ್ನು ಮಾಡಿಕೊಡಲಾಗಿತ್ತು. ಇದರಿಂದಾಗಿ ಈ ರೈತರುಗಳ ಕೃಷಿ ಪರಿಸ್ಥಿತಿ ಉತ್ತಮ ಗೊಂಡಿತ್ತು. ಜೊತೆಗೆ ಪರಮಪೂಜ್ಯರ ನದಿ ನೀರನ್ನು ಕೆರೆಗಳಿಗೆ ಜೋಡಿಸುವ ಮಹತ್ವಾಕಾಂಕ್ಷಿ ಯೋಜನೆಯ ಮೂಲಕ ನೀರಾವರಿ ಸೌಲಭ್ಯವು ಪರಿಣಾಮಕಾರಿಯಾಗಿ ಹೆಚ್ಚಾಗಿದ್ದುದರಿಂದ ಕೃಷಿ ಚಟುವಟಿಕೆಗಳು ತ್ವರಿತಗತಿಯಲ್ಲಿ ಅಭಿವೃದ್ಧಿಗೊಂಡವು.

ಶ್ರೀಗಳ ಮೂಲ ಆಶಯ ಗ್ರಾಮೀಣ ಅಭಿವೃದ್ಧಿ ಹಾಗೂ ಕೃಷಿಕರ ಆದಾಯ ಆರೋಗ್ಯ ಉತ್ತಮ ಪಡಿಸುವುದು ಅವರ ಎಲ್ಲ ಯೋಜನೆಗಳಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಅವರ ಕನಸಿನ ಕೂಸಾದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆಯ ಕೃಷಿಕರ ಅಭ್ಯುದಯಕ್ಕೆ ಕಟಿಬದ್ಧವಾಗಿದೆ. ಲಕ್ಷಾಂತರ ರೈತ ಕುಟುಂಬಗಳ ಅಭಿವೃದ್ಧಿಗೆ ಪರಮಪೂಜ್ಯರ ಕೃಷಿ ವಿಜ್ಞಾನ ಕೇಂದ್ರವು ನಿರಂತರವಾಗಿ ಕಳೆದ ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿದೆ. ಈ ರೀತಿ ವಿನೂತನ ಕೃಷಿ ತಂತ್ರಜ್ಞಾನಗಳನ್ನು ನಿರಂತರವಾಗಿ ರೈತರಿಗೆ ಪರಿಚಯಿಸುತ್ತಾ ಮಾರ್ಗದರ್ಶನ ನೀಡುತ್ತಾ ಕೃಷಿ ಕ್ಷೇತ್ರವನ್ನು ಸದೃಢಗೊಳಿಸುವಲ್ಲಿ ಶ್ರೀಗಳು ನಿರ್ಮಿಸಿರುವ ಕೃಷಿ ವಿಜ್ಞಾನ ಕೇಂದ್ರ, ಜಿಲ್ಲೆಯ ರೈತರ ಆತ್ಮೀಯ ಒಡನಾಡಿ ಆಗಿದೆ.

**- ಡಾ. ದೇವರಾಜ ಟಿ .ಎನ್.** ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ

# ಪೋಡಿ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಸಿಬ್ಬಂದಿಗಳ ನೇಮಕ

ಬೆಂಗಳೂರು, ಆ. 12 - ಪೋಡಿ ಪ್ರಕರಣಗಳ ತ್ವರಿತ ಇತ್ಯರ್ಥ ಹಾಗೂ ಗ್ರಾಮೀಣ ಭಾಗದ ಜನರ ಕಷ್ಟ-ಸುಖಗಳಿಗೆ ಸ್ಪಂದಿಸಲು 1,000 ಗ್ರಾಮ ಲೆಕ್ಕಿಗರು, 750 ಸರ್ವೇಯರ್ಸ್, 36 ಎಡಿಎಲ್‌ಆರ್‌ಗಳನ್ನು ನೇಮಕ ಮಾಡುವುದಾಗಿ ಕಂದಾಯ ಸಚಿವ ಕೃಷ್ಣಭೈರೇಗೌಡ ಇಂದಿಲ್ಲಿ ಪ್ರಕಟಿಸಿದ್ದಾರೆ.

ಕಾವೇರಿ, ಕೃಷ್ಣ ಕೊಳ್ಳ ವ್ಯಾಪ್ತಿಯಲ್ಲಿ ಆಗಸ್ಟ್ 15ರ ನಂತರ ಭಾರೀ ಮಳೆ ಬೀಳುವ ಮುನ್ಸೂಚನೆ ಇದ್ದು ಸಾರ್ವಜನಿಕರು ಎಚ್ಚರ ವಹಿಸುವಂತೆ ಅವರು ಇದೇ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಬಿದ್ದಿರುವ ಮಳೆ ಪರಿಸ್ಥಿತಿ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಪರಿಶೀಲನಾ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಗರ್‌ಹುಕ್ಕುಂ ಸಕ್ರಮಕ್ಕೆ ಅರ್ಜಿ ಸಲ್ಲಿಸಿ 40 ವರ್ಷ ಕಳೆದರೂ ಅರ್ಜಿಗಳನ್ನು ಇಲಾಖಾ ನೌಕರರು ವಿಲೇವಾರಿ ಮಾಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸೆಪ್ಟೆಂಬರ್ ತಿಂಗಳಿನಿಂದ ರಾಜ್ಯಾದ್ಯಂತ ಪೋಡಿ ಅಭಿಯಾನ ಆರಂಭಿಸುತ್ತೇವೆ. ಆ ವೇಳೆಗೆ ನಮ್ಮಲ್ಲಿ ಕೊರತೆ ಇರುವ ಈ ಸಿಬ್ಬಂದಿ ನೇಮಕಾತಿ ಕಾರ್ಯ ಪೂರ್ಣಗೊಳಿಸಲು ಸೂಚಿಸಿದ್ದೇನೆ ಎಂದರು.

ಕಾನೂನಿನಲ್ಲಿ ಅವಕಾಶಗಳಿದ್ದರೂ ರೈತರನ್ನು ದಿನನಿತ್ಯ ಕಚೇರಿಗಳಿಗೆ ಅಲೆಸಿ ಅವರಿಗೆ ಕಿರಿಕಿರಿ ಮಾಡುವುದು ಅಧಿಕಾರಿಗಳ ಕಸುಬಾಗಿ ಹೋಗಿದೆ. ಪ್ರಕರಣಗಳನ್ನು ಇತ್ಯರ್ಥಪಡಿಸಲು ಎಷ್ಟೇ ಕಾನೂನುಗಳನ್ನು ಅಳವಡಿಸಿದರೂ ಅವುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಅಧಿಕಾರಿಗಳು ಬಳಸಿಕೊಂಡು ಜನಸಾಮಾನ್ಯರಿಗೆ ಕಿರಿಕಿರಿ ಮಾಡುತ್ತಿದ್ದಾರೆ.

ಕೆಲವೆಡೆ 50 ಎಕರೆ ಪೋಡಿ ಮಾಡಿಕೊಡಿ ಎಂದರೆ 100 ಎಕರೆ ಮಾಡಿಕೊಟ್ಟಿದ್ದಾರೆ. ಬಡ ರೈತನೊಬ್ಬ ತಾನು ಮಾಡುತ್ತಿರುವ ಸಾಗುವಳಿ ಭೂಮಿಗೆ ದಾಖಲೆಗಳನ್ನು ಮಾಡಿಕೊಳ್ಳಲು ಹೊರಟರೆ ಆತನನ್ನು ಅಲೆದಾಡಿಸುತ್ತಿದ್ದಾರೆ.ಇದಕ್ಕೆಲ್ಲಾ ಇತಿಶ್ರೀ ಹಾಡುವ ಉದ್ದೇಶದಿಂದಲೇ ಪೋಡಿ ಅಭಿಯಾನ ಆರಂಭಿಸಿದ್ದೇವೆ. ಈ ಸಂದರ್ಭದಲ್ಲಿ ಇಲಾಖಾ ನೌಕರರು ಮತ್ತು ಅಧಿಕಾರಿಗಳು ಕಾನೂನಿನ ಚೌಕಟ್ಟಿನಡಿ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ ನಾವು ನಿಮ್ಮ ಮೇಲೆ ಕಠಿಣ ಕ್ರಮ ಜರುಗಿಸಬೇಕಾದೀತು ಎಂದು ಎಚ್ಚರಿಸಿದ್ದೇನೆ ಎಂದರು.

ಕಳೆದ ವರ್ಷಗಳಿಗೆ ಹೋಲಿಕೆ ಮಾಡಿದರೆ, ಈ ವರ್ಷ ರಾಜ್ಯದ ಎಲ್ಲಾ ಭಾಗಗಳಲ್ಲೂ ವಾಡಿಕೆಗಿಂತ ಶೇಕಡ 20ರಷ್ಟು ಮಳೆ ಹೆಚ್ಚಾಗಿದ್ದು, 80 ಸಾವಿರ ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿದೆ. ಮುಂಜಾಗ್ರತಾ ಕ್ರಮದಿಂದಾಗಿ ಬೆಳೆ ನಷ್ಟ ಕಡಿಮೆಯಾಗಿದೆ, ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ಭರ್ತಿಯಾಗಿರುವುದರಿಂದ ಈ ಬಾರಿ ಕೃಷಿ ಉತ್ಪಾದನೆಯಲ್ಲಿ ದಾಖಲೆ ನಿರ್ಮಿಸುವ ಲಕ್ಷಣಗಳಿವೆ ಎಂದು ಸಚಿವರು ಹೇಳಿದರು.

ಬೆಳೆ ಹಾನಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಎಲ್ಲಿ ಬೆಳೆ ನಷ್ಟವಾಗಿದೆ ಎಂಬುದನ್ನು ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಲೋಡ್ ಮಾಡಿ, ಅರ್ಜಿ ಪಡೆದು ಬೆಳೆ ನಷ್ಟ ಪರಿಹಾರ ನೀಡುವಂತೆ ಸೂಚಿಸಿದ್ದೇವೆ. ನಮ್ಮಲ್ಲಿ ಸಾಕಷ್ಟು ಹಣವಿದೆ, ಇದನ್ನೇ ಬೆಳೆ ಕಳೆದುಕೊಂಡ ರೈತರಿಗೆ ವಿತರಿಸಿ ಎಂದು ಹೇಳಿದ್ದೇನೆ ಎಂದು ಕೃಷ್ಣಭೈರೇಗೌಡ ಹೇಳಿದರು.

ಮಳೆಯಿಂದ ಇದುವರೆಗೂ 58 ಮಂದಿ ಅಸುನೀಗಿದ್ದಾರೆ, ಅವರ ಕುಟುಂಬಗಳಿಗೂ ಪರಿಹಾರ ನೀಡುವಂತೆ ಸೂಚಿಸಲಾಗಿದೆ. ಭಾಗಶಃ ಮನೆ ಕಳೆದುಕೊಂಡವರಿಗೆ ಒಂದು ಲಕ್ಷ ರೂ. ಪರಿಹಾರ ನೀಡಲಾಗುವುದು, ಸಂಪೂರ್ಣ ಮನೆ ಹಾನಿಗೆ ಸರ್ಕಾರವೇ ಮನೆ ಕಟ್ಟಿಸಿಕೊಡಲಿದೆ ಎಂದು ತಿಳಿಸಿದರು.

ಆಗಸ್ಟ್ 15ರ ನಂತರ ಮುಂಗಾರು ಮತ್ತಷ್ಟು ಚುರುಕುಗೊಂಡು ಭಾರೀ ಮಳೆ ಆಗುವ ಸಾಧ್ಯತೆ ಇದ್ದು, ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಶಿಥಿಲ ಮನೆಗಳಲ್ಲಿ ವಾಸವಿರುವವರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸುವಂತೆ ಮತ್ತು ನದಿ ಪಾತ್ರದ ಜನರ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡುವಂತೆ ಸೂಚಿಸಲಾಗಿದೆ ಎಂದರು.

## ಬಾಂಗ್ಲಾದಲ್ಲಿ ನಗದು ಹಣಕ್ಕೆ ಬರ

(1ನೇ ಪುಟದಿಂದ) ಹಣ ಬಿಡಿಸಿಕೊಳ್ಳುವುದರ ಮೇಲೆ ಮಿತಿ ಹೇರಲಾಗಿದೆ ಎಂದು ಕೇಂದ್ರ ಬ್ಯಾಂಕ್ ತಿಳಿಸಿದೆ. ಇದರಿಂದಾಗಿ ನಗದು ಆಧಾರಿತ ವಹಿವಾಟು ನಡೆಸುವ ಉದ್ಯಮಗಳ ಮೇಲೆ ಪರಿಣಾಮವಾಗಿದೆ. ಮುಂದಿನ ವಾರದವರೆಗೂ ಈ ನಿರ್ಬಂಧ ಮುಂದುವರೆಯಲಿದೆ ಎಂದು ದಿ ಡೈಲಿ ಸ್ಟಾರ್ ಪತ್ರಿಕೆ ವರದಿ ಮಾಡಿದೆ

ಜುಲೈ ಮಧ್ಯಾವಧಿಯಿಂದ ವಿದ್ಯಾರ್ಥಿಗಳ ಪ್ರತಿಭಟನೆ ದೇಶಾದ್ಯಂತ ಆರಂಭವಾಗಿತ್ತು. ಆನಂತರದಿಂದ ಉದ್ಯಮಗಳ ವಹಿವಾಟು ಸ್ಥಗಿತಗೊಂಡಿದೆ.

ಈ ಬಗ್ಗೆ ಮಾತನಾಡಿರುವ ಸಗಟು ತೈಲ ಮಾರಾಟಗಾರ ಅಬೂಬಕರ್ ಸಿದ್ದಿಕಿ, ಬ್ಯಾಂಕುಗಳು ನಗದಿನ ಮೇಲೆ ಮಿತಿ ಹೇರಿರುವುದು ದೊಡ್ಡ ಸಮಸ್ಯೆಯಾಗಿದೆ. ಇದರಿಂದಾಗಿ ವಹಿವಾಟಿಗೆ ತೊಂದರೆಯಾಗಿದೆ ಎಂದವರು ಹೇಳಿದ್ದಾರೆ.

ಎಲ್ಲಾ ಉದ್ಯಮಿಗಳು ಚೆಕ್ ಸ್ವೀಕರಿಸಲು ಒಪ್ಪುವುದಿಲ್ಲ. ನಾವು ನಗದಿನ ಮೂಲಕವೂ ವ್ಯವಹಾರ ನಡೆಸಬೇಕಾಗುತ್ತದೆ. ಶೀಘ್ರ ಸಮಸ್ಯೆ ಬಗೆಹರಿಸಿದಷ್ಟು ಉದ್ಯಮಗಳಿಗೆ ಅನುಕೂಲವಾಗುತ್ತದೆ ಎಂದು ರಫ್ತು ಉದ್ಯಮಿ ತಸ್ಲಿಮ್ ಶಹ್ರಿಯಾರ್ ಹೇಳಿದ್ದಾರೆ.

ಬ್ಯಾಂಕುಗಳು ನಿರ್ಬಂಧ ಹೇರಿರುವ ಕಾರಣದಿಂದ ದಿನಗೂಲಿ ಪಾವತಿಸುವುದು ಸಮಸ್ಯೆ ಆಗುತ್ತಿದೆ. ಕೂಲಿಗಾಗಿ ಇನ್ನೊಂದು ವಾರ ಕಾಯುವಂತೆ ಹಲವಾರು ಉದ್ಯಮಿಗಳು ತಿಳಿಸುತ್ತಿದ್ದಾರೆ.

ಈ ನಡುವೆ, ಬಾಂಗ್ಲಾದೇಶ ಪೊಲೀಸರು ತಮ್ಮ ಮುಷ್ಕರವನ್ನು ಅಂತ್ಯಗೊಳಿಸಿ ಕರ್ತವ್ಯಕ್ಕೆ ಮರಳಲು ಒಪ್ಪಿದ್ದಾರೆ. ಪ್ರತಿಭಟನೆ ನಡೆಸುತ್ತಿದ್ದ ಪೊಲೀಸರ ಬಹುತೇಕ ಬೇಡಿಕೆಗಳನ್ನು ಬಾಂಗ್ಲಾದೇಶದ ಹಂಗಾಮಿ ಸರ್ಕಾರ ಒಪ್ಪಿಕೊಂಡಿದೆ. ಆಗಸ್ಟ್ 6 ರಿಂದ ಬಾಂಗ್ಲಾದೇಶದ ಪೊಲೀಸರು ಪ್ರತಿಭಟನೆ ಆರಂಭಿಸಿದ್ದರು. ಇದರಿಂದಾಗಿ ದೇಶದಲ್ಲಿ ಭದ್ರತೆಯ ತೀವ್ರ ಸಮಸ್ಯೆ ಉಂಟಾಗಿತ್ತು.

## ರೈತರ ಹೆದ್ದಾರಿ ತಡೆ : ಆಂಬ್ಯುಲೆನ್ಸ್, ಅಗತ್ಯ ಸೇವೆಗಳ ಮಾತುಕತೆಗೆ ಸುಪ್ರೀಂ ಸೂಚನೆ

ನವದೆಹಲಿ, ಆ. 12 - ರೈತರು ಪ್ರತಿಭಟನೆ ನಡೆಸುತ್ತಿರುವ ದೆಹಲಿ ಬಳಿಯ ಶಂಭು ಗಡಿಯ ಹೆದ್ದಾರಿಯನ್ನು ಭಾಗಶಃ ತೆರವುಗೊಳಿಸಲು ರೈತರ ಜೊತೆ ಮಾತುಕತೆ ನಡೆಸುವಂತೆ ಸುಪ್ರೀಂ ಕೋರ್ಟ್ ತಿಳಿಸಿದೆ. ಕಳೆದ ಫೆಬ್ರವರಿ 13 ರಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ, ಆಂಬ್ಯುಲೆನ್ಸ್ ಹಾಗೂ ಅಗತ್ಯ ಸೇವೆಗಳಿಗಾಗಿ ರಸ್ತೆಯನ್ನು ಭಾಗಶಃ ತೆರವುಗೊಳಿಸಬೇಕಿದೆ ಎಂದು ಹೇಳಿದೆ.

ಕನಿಷ್ಠ ಬೆಂಬಲ ಬೆಲೆಗೆ ಸಂಬಂಧಿಸಿದಂತೆ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಇವರ ಜೊತೆ ಮಾತನಾಡಲು ಸ್ವತಂತ್ರ ಸಮಿತಿಯೊಂದನ್ನು ರಚಿಸಲು ಹೆಸರುಗಳನ್ನು ಸೂಚಿಸುವಂತೆ ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಈ ಹಿಂದೆ ತಿಳಿಸಿತ್ತು. ಉಭಯ ಸರ್ಕಾರಗಳು ರಾಜಕೀಯೇತರ ಹೆಸರುಗಳನ್ನು ಸೂಚಿಸಿರುವುದಕ್ಕೆ ನ್ಯಾಯಾಲಯ ಮೆಚ್ಚುಗೆ ವ್ಯಕ್ತಪಡಿಸಿದೆ.

ಪ್ರತಿಭಟನೆ ನಡೆಸುತ್ತಿರುವ ಸ್ಥಳದ ಬಳಿ ಅಳವಡಿಸಲಾಗಿರುವ ತಡೆಗಳನ್ನು ತೆರವುಗೊಳಿಸುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಈ ಹಿಂದೆ ತಿಳಿಸಿತ್ತು. ಇದನ್ನು ಪ್ರಶ್ನಿಸಿ ಹರಿಯಾಣ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ದೆಹಲಿ ಕಡೆ ತೆರಳುವುದಾಗಿ ರೈತ ಸಂಘಟನೆಗಳು ತಿಳಿಸಿದ ಹಿನ್ನೆಲೆಯಲ್ಲಿ ಹರಿಯಾಣ ಸರ್ಕಾರ ಅಂಬಾಲ - ನವದೆಹಲಿ ರಾಷ್ಟ್ರೀಯ ಹೆದ್ದಾರಿಯ ಶಂಭು ಗಡಿಯಲ್ಲಿ ಬ್ಯಾರಿಕೇಡ್ ಅಳವಡಿಸಿತ್ತು.

## ವಿನಯ್ ಉಚ್ಚಾಟಿಸಲು ಶಿಸ್ತು ಸಮಿತಿಗೆ ಶಿಫಾರಸ್ಸು

(1ನೇ ಪುಟದಿಂದ) ತಪ್ಪಿಸುವ ಕಾರ್ಯ ಮಾಡುತ್ತಿದ್ದಾರೆ. ರಾಜಕೀಯ ನಾಯಕತ್ವದ ಬಗ್ಗೆ ತಿಳಿಯದ ಇವರು ಪಕ್ಷದ ಕಚೇರಿಗೆ ಕಾಲಿಟ್ಟಿಲ್ಲ, ಬಾವುಟ ಕಟ್ಟಿಲ್ಲ ಎಂದು ಟೀಕಿಸಿದರು.

ಟಿಕೆಟ್ ವಿಚಾರದಲ್ಲೂ ತಪ್ಪು ಮಾಡಿದ್ದಿರಿ. ಇಲ್ಲಿಗೆ ನಿಮ್ಮ ತಪ್ಪು ತಿದ್ದಿಕೊಳ್ಳಿ. ಇನ್ಮುಂದೆ ಜನರಿಗೆ ತಪ್ಪು ಮಾಹಿತಿ ಕೊಡುವ ಹೇಳಿಕೆ ನೀಡಿದರೆ, ಅದರ ಪರಿಣಾಮ ಎದುರಿಸುತ್ತೀರಿ ಎಂದು ಎಚ್ಚರಿಸಿದರು. ಜಾತಿ ಎತ್ತಿ ಕಟ್ಟುವುದು, ಒಗ್ಗಟ್ಟು ಹಾಳು ಮಾಡುವುದು ಮತ್ತು ಸಮಾಜಕ್ಕೆ ಅವಮಾನಿಸುವ ಕಾರ್ಯವನ್ನು ವಿನಯ್ ಕುಮಾರ್ ಕೈ ಬಿಡಬೇಕು ಎಂದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಚಮನ್ ಸಾಬ್, ಎ. ನಾಗರಾಜ್, ದೂಡಾ ಸದಸ್ಯ ಎಂ. ಮಂಜುನಾಥ್, ಒಬಿಸಿ ರಾಜ್ಯ ಕಾರ್ಯದರ್ಶಿ ನಾಗರಾಜ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮಂಗಳಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದ್ರಾಕ್ಷಾಯಣಿ, ರಾಜೇಶ್ವರಿ, ಚಂದ್ರು, ಶುಭ ಮಂಗಳಾ ಸುದ್ದಿಗೋಷ್ಠಿಯಲ್ಲಿದ್ದರು.

## ಆರೋಪ : ಯಥಾಸ್ಥಿತಿಯಲ್ಲಿ ಷೇರುಪೇಟೆ

(1ನೇ ಪುಟದಿಂದ) ಸೂಚ್ಯಂಕ 20.50 ಅಂಕಗಳ ಇಳಿಕೆ ಕಂಡು 24,347 ಅಂಕಗಳಲ್ಲಿ ಅಂತ್ಯಗೊಂಡಿತು.

ಭಾರತೀಯ ಷೇರುಪೇಟೆ ಬಹುತೇಕ ಯಥಾಸ್ಥಿತಿಯಲ್ಲಿ ಅಂತ್ಯಗೊಂಡಿದೆ. ಹಿಂಡನ್‌ಬರ್ಗ್ ವರದಿ ಕಾರಣದಿಂದ ಆರಂಭದಲ್ಲಿ ಕುಸಿತವಾದರೂ ನಂತರ ಜಾಗತಿಕ ಮಾರುಕಟ್ಟೆಯ ಸಕಾರಾತ್ಮಕ ಅಂಶಗಳಿಂದ ಚೇತರಿಕೆ ಕಂಡಿದೆ ಎಂದು ಜಿಯೋಜಿತ್ ಫೈನಾನ್ಷಿಯಲ್ ಸರ್ವೀಸಸ್ ಮುಖ್ಯ ಸಂಶೋಧಕ ವಿನೋದ್ ನಾಯರ್ ಹೇಳಿದ್ದಾರೆ.

ಸೆಬಿ ಅಧ್ಯಕ್ಷೆ ಮಾಧವಿ ಬುಚ್ ಹಾಗೂ ಅವರ ಪತಿ ಪರೋಕ್ಷವಾಗಿ ಅದಾನಿ ಸಮೂಹದ ಷೇರುಗಳನ್ನು ಹೊಂದಿದ್ದಾರೆ ಎಂದು ಹಿಂಡನ್‌ಬರ್ಗ್ ರಿಸರ್ಚ್ ವರದಿ ಮಾಡಿತ್ತು. ಆದರೆ, ಮಾಧಬಿ ಹಾಗೂ ಅವರ ಪತಿ ಆರೋಪಗಳನ್ನು ತಳ್ಳಿ ಹಾಕಿದ್ದರು. ಅದಾನಿ ಸಮೂಹ ಸಹ ಆರೋಪಗಳು ನಿರಾಧಾರ ಎಂದು ಹೇಳಿತ್ತು.

ಸೋಮವಾರ ಬೆಳಗ್ಗೆ ಅದಾನಿ ಸಮೂಹದ 10 ಷೇರುಗಳು ತೀವ್ರ ಕುಸಿತ ಕಂಡಿದ್ದವು. ನಂತರದಲ್ಲಿ ಎಲ್ಲಾ ಷೇರುಗಳು ಚೇತರಿಕೆ ಕಂಡವು.

## ನಾಳೆ ಲೋಕಾಯುಕ್ತರಿಂದ ಅಹವಾಲು

ದಾವಣಗೆರೆ, ಆ. 12 - ದಾವಣಗೆರೆ ಲೋಕಾಯುಕ್ತ ವಿಭಾಗದ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ ಅವರು ನಗರದ ಪ್ರವಾಸಿ ಮಂದಿರದಲ್ಲಿ ನಾಡಿದ್ದು ದಿನಾಂಕ 14 ರ ಬುಧವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಸರ್ಕಾರದ ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ಇತ್ಯರ್ಥ ಮಾಡದೇ ಬಾಕಿ ಇಟ್ಟಿರುವ ಬಗ್ಗೆ ಸಾರ್ವಜನಿಕರು ತಮ್ಮ ದೂರು ಸಲ್ಲಿಸಬಹುದು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೆ, ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ.

**ಹರಪನಹಳ್ಳಿ ಶ್ರೀ ವೆಂಕಟರಮಣಸ್ವಾಮಿ ಪರ್ಮನೆಂಟ್ ಭಂಡಾರ ನಿಧಿ ಲಿಮಿಟೆಡ್, ಹರಪನಹಳ್ಳಿ.**

ವಿಜಯನಗರ ಜಿಲ್ಲೆ, ಫೋ. : 08398, 280215

**ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಮೀಟಿಂಗ್ ನೋಟಿಸ್**


**ಮಾನ್ಯ ಸರ್ವ ಸದಸ್ಯರ ಗಮನಕ್ಕೆ**

ಸಂಸ್ಥೆಯ 31.03.2024ಕ್ಕೆ ಮುಗಿದಿರುವ ಕಂಪನಿಯ ವಾರ್ಷಿಕ ವರದಿಯ ಬಗ್ಗೆ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 05.09.2024ರ ಗುರುವಾರ ಮಧ್ಯಾಹ್ನ 2.00 ಗಂಟೆಗೆ ಸರಿಯಾಗಿ ಕಂಪನಿಯ ನೋಂದಾಯಿತ ಕಛೇರಿಯ ಸಭಾ ಭವನದಲ್ಲಿ ಕರೆಯಲಾಗಿದೆ.

ವಿ.ಸೂ. : ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು ಕಳುಹಿಸಲಾಗಿದ್ದು, ತಲುಪದಿದ್ದವರು ಕಛೇರಿಯಲ್ಲಿ ಭೇಟಿ ಮಾಡಿ ನೋಟಿಸನ್ನು ಪಡೆಯಬಹುದು. ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಭೆಗೆ ಆಗಮಿಸಲು ವಿನಂತಿ.

ಸ್ಥಳ : ಹರಪನಹಳ್ಳಿ. ನಿರ್ದೇಶಕರುಗಳ ಅಪ್ಪಣೆ ಮೇರೆಗೆ
ದಿನಾಂಕ : 08.08.2024 ಸಹಿ/-ಟಿ. ವ್ಯಾಸರಾಜ, ಛೇರ್ಮನ್

**ಹುಟ್ಟು ಹಬ್ಬದ ಶುಭಾಶಯಗಳು**





ದಾವಣಗೆರೆ ವಕೀಲರ ಸಹಕಾರ ಸಂಘದ ಅಧ್ಯಕ್ಷರೂ, ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕರೂ ದಾವಣಗೆರೆ ಜಿಲ್ಲಾ ವಕೀಲರ ಸಂಘದ ಮಾಜಿ ಉಪಾಧ್ಯಕ್ಷರೂ, ನಮ್ಮ ಆತ್ಮೀಯರೂ ಆದ

**ಶ್ರೀ ಹೆಚ್. ದಿವಾಕರ್**

ಇವರಿಗೆ ಹುಟ್ಟು ಹಬ್ಬದ ಶುಭಾಶಯಗಳು.

- **ಎಲ್. ದಯಾನಂದ್,** ದಾವಣಗೆರೆ ಜಿಲ್ಲಾ ಅಧಿವ್ಯಕ್ತ ಪರಿಷತ್, ಜಿಲ್ಲಾಧ್ಯಕ್ಷರು.
- **ಎ.ಸಿ. ರಾಘುವೇಂದ್ರ,** ವಕೀಲರು, ರಾಜ್ಯ ಸಮಿತಿ ಸದಸ್ಯರು, ಬಿಜೆಪಿ ರಾಜ್ಯ ಕಾನೂನು ಪ್ರಕೋಷ್ಠ
- **ಅಜೀರ್ ಪಠಾಣ್,** ಮಾಲೀಕರು, ಎಸ್‌ಎಸ್‌ಎಸ್ ಎಂಟರ್ ಪ್ರೈಸಸ್, ದಾವಣಗೆರೆ
- **ಎ.ಎಸ್.ಮಂಜುನಾಥ್** ಸಹ ಕಾರ್ಯದರ್ಶಿ, ವಕೀಲರ ಸಂಘ, ದಾವಣಗೆರೆ.
- **ಕಿರಣ್ ಕುಮಾರ್ ಸುರ್ವೆ** ಬಿಜೆಪಿ ಮುಖಂಡರು.
- **ತಿರುಮಲ್ಲೇಶ್** • **ಸಿದ್ದಲಿಂಗೇಶ್ವರ (ಸಿದ್ದು)**
- **ಶ್ರೀ ಸಾಯಿನಿಧಿ ಕಮ್ಯೂನಿಕೇಷನ್ಸ್,** ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.,
- **ಆಲೂರು ಪ್ರಕಾಶ್** • **ಪ್ರಶಾಂತ್** • **ಡಿ.ಎಸ್. ಶಿವಶಂಕರಪ್ಪ**
- **ಕೆ. ಜಗದಪ್ಪ,** ವಕೀಲರು • **ಡಿ.ಎಂ. ಕಾಂತರಾಜ್,** ಬಿಜೆಪಿ ಮುಖಂಡರು.
- **ನೀಲಕಂಠ,** ನೋಟರಿ • **ಸುರೇಶ್ ಶಿಂಧೆ,**
- **ಎಸ್.ಎನ್.ವಿಜಯಕುಮಾರ್** • **ಎಲ್ಲೋಜಿರಾವ್ ಪವಾರ್**

**ಗೌರವಾನ್ವಿತ ಪ್ರಧಾನ ಸೀನಿಯರ್ ಸಿವಿಲ್ ನ್ಯಾಯಾಲಯ ಹಾಗೂ ಸಿ.ಜೆ.ಎಮ್ ದಾವಣಗೆರೆ**

**ಜಿ ಅಂಡ್ ಡಬ್ಲ್ಯು.ಸಿ.ನಂ. 25/2024**

**ಅರ್ಜಿದಾರಳು :** 1. ಮಾಸ್ಟರ್ ವಿನಯ್ ವಿ. ಬಿನ್ ಲೇಟ್ ವೆಂಕಟೇಶ್ .ಬಿ.ಎಸ್, ವಯಸ್ಸು ಸುಮಾರು 14 ವರ್ಷ, 2. ಕುಮಾರಿ ಪ್ರೇರಣ ವಿ. ಬಿನ್ ಲೇಟ್ ವೆಂಕಟೇಶ್.ಬಿ.ಎಸ್. ವಯಸ್ಸು ಸುಮಾರು 13 ವರ್ಷ, 1 & 2 ಅರ್ಜಿದಾರರು ಮೈನರ್ ಇದ್ದು ನ್ಯಾಚುರಲ್ ಗಾರ್ಡಿಯನ್ ಆಗಿ ಖಾಸಾ ತಾಯಿ ಅರ್ಜಿದಾರ 3. 3. ಶ್ರೀಮತಿ ಆಶಾ. ಕೆ.ಎಸ್ ಕೋಂ ಲೇಟ್ ವೆಂಕಟೇಶ್.ಬಿ.ಎಸ್, ವಯಸ್ಸು ಸುಮಾರು 41 ವರ್ಷ ವಾಸ : ಮನೆ ನಂ.732, ಚೌಡೇಶ್ವರಿ ದೇವಸ್ಥಾನದ ಹತ್ತಿರ, ಚಲುವಾದಿ ಕೇರಿ, ದಾವಣಗೆರೆ. **- ವಿರುದ್ಧ –**

**ಎದುರುದಾರರು** : ಇಲ್ಲ

**ಸಾರ್ವಜನಿಕ ಪ್ರಕಟಣೆಗಾಗಿ**

1 ಮತ್ತು 2 ಅರ್ಜಿದಾರರ ತಂದೆಯ ಹೆಸರಿಗೆ (ವೆಂಕಟೇಶ್.ಬಿ.ಎಸ್.) ದಾವಣಗೆರೆಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಿ.18.5.2011ರಂದು ಗುತ್ತಿಗೆ ಹಾಗೂ ಕ್ರಯ ಕರಾರು ಪತ್ರ ಮುಖೇನ ಹಂಚಿಕೆಯಾಗಿದ್ದು, ಸದರಿ ನೋಂದಣಿ ಗುತ್ತಿಗೆ ಹಾಗೂ ಕ್ರಯ ಕರಾರು ಪತ್ರ ಸಂಖ್ಯೆ 2153. ತದನಂತರ ಸದರಿ ವೆಂಕಟೇಶ್.ಬಿ.ಎಸ್ ದಿ.16.9.2020ರಂದು ಪೌತಿಯಾಗಿರುತ್ತಾರೆ.ಮೃತ ವೆಂಕಟೇಶ್.ಬಿ.ಎಸ್ ಇವರು ತಮ್ಮ ಜೀವಿತ ಕಾಲದಲ್ಲಿ ದಾವಣಗೆರೆಯ ಮಹಾನಗರ ಪಾಲಿಕೆಯಲ್ಲಿ ಪ್ರಥಮ ದರ್ಜೆ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು, ಸದರಿಯವರ ಪೌತಿಯ ನಂತರ ಸದರಿ ಕೆಲಸವನ್ನು ಅವರ ಹೆಂಡತಿಯಾದ ಆಶಾ.ಕೆ.ಎಸ್ (1 & 2 ಅರ್ಜಿದಾರರ ನ್ಯಾಚುರಲ್ ಗಾರ್ಡಿಯನ್) ಇವರಿಗೆ ನೀಡಿದ್ದು, ಹಾಲಿ ಸದರಿಯವರು ಸದರಿ ಕಛೇರಿಯಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಮಾಡಿಕೊಂಡಿರುತ್ತಾರೆ.

ಮೃತ ವೆಂಕಟೇಶ್ ಬಿ.ಎಸ್ ಇವರಿಗೆ 1 & 2 ಅರ್ಜಿದಾರರು ಹಾಗೂ ಸದರಿಯವರ ನ್ಯಾಚುರಲ್ ಗಾರ್ಡಿಯನ್ ಆದ ಆಶಾ.ಕೆ.ಎಸ್ ಆದ ನಾವುಗಳು ಮಾತ್ರ ವಾರಸುದಾರರು ಇರುತ್ತೇವೆ. ನಂತರ ಸದರಿ ಆಶಾ ಕೆ.ಎಸ್ ಬಾಕಿ ಮೊತ್ತವನ್ನು ದಾವಣಗೆರೆಯ ನಗರಾಭಿವೃದ್ಧಿ ಪ್ರಾಧಿಕಾರದವರಿಗೆ ಪಾವತಿಸಿ, ಸದರಿಯವರಿಂದ ದಿ.8.7.2024ರಂದು ಸದರಿ ಆಶಾ.ಕೆ.ಎಸ್ ಹೆಸರಿಗೆ ಶುದ್ದ ಕ್ರಯ ಪತ್ರವನ್ನು ಮಾಡಿಸಿಕೊಂಡಿದ್ದು, ಸದರಿ ನೋಂದಣಿ ಶುದ್ದ ಕ್ರಯ ಪತ್ರ ಸಂಖ್ಯೆ 6342. ಸದರಿ ನೋಂದಣಿ ಶುದ್ದ ಕ್ರಯ ಪತ್ರಕ್ಕೆ 1 ಮತ್ತು 2 ಅರ್ಜಿದಾರರು ಸಹಾ ಹಿಸ್ಸೆದಾರರು ಇರುತ್ತಾರೆ.

1 ಮತ್ತು 2 ಅರ್ಜಿದಾರರು ಹಾಗೂ ನ್ಯಾಚುರಲ್ ಗಾರ್ಡಿಯನ್ ಆದ ಆಶಾ.ಕೆ.ಎಸ್ ಆದ ನಾವುಗಳು ಜಂಟಿಯಾಗಿ ಷೆಡ್ಯೂಲ್‌ನಲ್ಲಿ ತೋರಿಸಲಾದ ಸೊತ್ತಿನ ಅಭಿವೃದ್ಧಿಗಾಗಿ ಮತ್ತು ಅಲ್ಪವಹಿ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸದರಿ ಸೊತ್ತನ್ನು ದಾವಣಗೆರೆ ಸಿಟಿ, ಬ್ಯಾಂಕ್ ಆಫ್ ಬರೋಡ, ಪಿ.ಬಿ ರಸ್ತೆ ಶಾಖೆಯಲ್ಲಿ ತೋರಾಧಾರ ಮಾಡಿ ಮನೆ ಕಟ್ಟಲು ಸಾಲಬೇಕೆಂದು ಜೂನ್ ಮಾಹೆ 2024ನೇ 4ನೇ ವಾರದಲ್ಲಿ ಹೋಗಿ ಕೋರಿದಾಗ, ಸದರಿ ಬ್ಯಾಂಕಿನವರು ಅರ್ಜಿಯ ಷೆಡ್ಯೂಲ್ ಸೊತ್ತಿನಲ್ಲಿ ಅಲ್ಪವಹಿ ಮಕ್ಕಳ ಹಿಸ್ಸೆಯು ಇರುವುದರಿಂದ ಮಾನ್ಯ ನ್ಯಾಯಾಲಯದ ಅನುಮತಿಯ ಅತ್ಯವಶ್ಯಕವಾಗಿರುತ್ತದೆ. ಆ ಕಾರಣಕ್ಕಾಗಿಯೇ ಅರ್ಜಿದಾರರು ಅಲ್ಪವಹಿ ಮಕ್ಕಳ ಪೋಷಕ ಮತ್ತು ಆಸ್ತಿ ಸಂರಕ್ಷಕಳಾಗಿ ನೇಮಕ ಮಾಡಲು ಮತ್ತು ಷೆಡ್ಯೂಲ್‌ನಲ್ಲಿ ಕಾಣಿಸಲಾದ ಸೊತ್ತನ್ನು ತೋರಾಧಾರ ಮಾಡಿ ದಾವಣಗೆರೆ ಸಿಟಿ, ಬ್ಯಾಂಕ್ ಆಫ್ ಬರೋಡ, ಪಿ.ಬಿ ರಸ್ತೆ ಶಾಖೆಯಲ್ಲಿ ಮನೆ ಕಟ್ಟಲು ಸಾಲವನ್ನು ಪಡೆಯುವ ಅನುಮತಿಗಾಗಿ ಈ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಒಂದು ವೇಳೆ ಯಾರಿಗಾದರೂ ಈ ಅರ್ಜಿಗೆ ತಕರಾರು ಇದ್ದಲ್ಲಿ ತಾವಾಗಲೀ ಅಥವಾ ತಮ್ಮ ವಕೀಲರ ಮುಖೇನವಾಗಲೀ **ದಿನಾಂಕ 23.09.2024 ರಂದು ಬೆಳಗ್ಗೆ 11 ಗಂಟೆಗೆ** ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ಒಂದು ವೇಳೆ ಹಾಜರಾಗದಿದ್ದಲ್ಲಿ ಏನೂ ತಕರಾರು ಇಲ್ಲವೆಂದು ತೀರ್ಮಾನಿಸಲಾಗುವುದು ಎಂದು ಭಾವಿಸತಕ್ಕದ್ದು.

**- ಷೆಡ್ಯೂಲ್ -**

ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ಸಿಟಿ, ದಾವಣಗೆರೆಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ರಚಿಸಿರುವ 1302 ನೇ ಸಂಖ್ಯೆಯ ನಿವೇಶನದ ಸರಹದ್ದುಗಳು/ಖಾಲಿ ಸೈಟಿಗೆ **ಚಕ್ಕುಬಂದಿ : ಪೂರ್ವಕ್ಕೆ** : ನಿವೇಶನ ನಂ. 1303, **ಪಶ್ಚಿಮಕ್ಕೆ** : ನಿವೇಶನ ನಂ. 1301, **ಉತ್ತರಕ್ಕೆ** : ನಿವೇಶನ ನಂ. 1287, **ದಕ್ಷಿಣಕ್ಕೆ** : 9 ಮೀಟರ್ ರಸ್ತೆ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊದಿಗೆ ತಾರೀಖು 9.8.2024 ರಂದು ಕೊಡಲ್ಪಟ್ಟಿದೆ.

**(ವಿ.ಸಿ.ಮಹಂತಸ್ವಾಮಿ)**
ವಾದಿ ಪರ ವಕೀಲರು,
ಡೋರ್ ನಂ.7/400, ದೀಕ್ಷಿತ್ ರಸ್ತೆ, ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
**(ಸಿಜೆಎಮ್) ಶಿರಸ್ತೇದಾರರು**

# ಕೋಟಿಗೊಬ್ಬ ಶರಣ ಪೂಜ್ಯ ಸಿದ್ದರಾಮಣ್ಣ ಅಪ್ಪಗಳು



103ನೇ ಇಳಿವಯಸ್ಸಿನಲ್ಲೂ ಬತ್ತದ ಉತ್ಸಾಹ, ಸುಮಾರು 20 ಸಾವಿರ ವಚನಗಳು ನಾಲಿಗೆಯ ತುದಿಯಲ್ಲಿ, ಅಷ್ಟು ಪ್ರಖರವಾದ ಜ್ಞಾಪಕ ಶಕ್ತಿಯುಳ್ಳ ಕೋಟಿಗೊಬ್ಬ ಶರಣ ಸಿದ್ದರಾಮಣ್ಣ ಅಪ್ಪಗಳೊಂದಿಗೆ ಸುಮಾರು 30 ವರ್ಷಗಳ ಸುದೀರ್ಘ ಒಡನಾಟದಲ್ಲಿದ್ದವರು ನಾವು. ಅಂದಿನಿಂದ ಇಂದಿನವರೆಗೆ ಅವರ ಬಗ್ಗೆ ಇರುವ ಭಕ್ತಿ, ಗೌರವಗಳು ಒಂದಿನಿತು ಕಡಿಮೆಯಾಗದೇ ಹೆಚ್ಚುತ್ತಲೇ ಬಂದಿದೆ.

ಅವರ ಬಸವಮಯ ಬದುಕು ನಮ್ಮಂತಹವರಿಗೆ ನಿತ್ಯ ನಿರಂತರ ಮಾರ್ಗದರ್ಶಿ. ಅವರ ಬದುಕೇ ಒಂದು ಬಸವ ಸಿದ್ಧಾಂತ. ಬಸವಣ್ಣನ ಕುರಿತು ಮಾತಾಡುವವರೆಷ್ಟೋ? ಭಕ್ತಿಯುಳ್ಳವರೆಷ್ಟೋ? ಬದಲು ಹೃದಯಾರೆ ಅಪ್ಪಿ ನಡೆದು ನುಡಿದವರಿಲ್ಲ. ಆದರೆ ಸಿದ್ದರಾಮಣ್ಣ ಅಪ್ಪಗಳು ನಡೆದು ನುಡಿದವರು. ವಿ. ಸಿದ್ದರಾಮಣ್ಣರು ಭಾಲ್ಕಿಯ ಶ್ರೀ ಚನ್ನಬಸವ ಪಟ್ಟದೇವರ ಶಿಷ್ಯರಾಗಿ, ಅನುಯಾಯಿಗಳಾಗಿ, ಗೆಳೆಯರಾಗಿ, ಹಿತೈಷಿಗಳಾಗಿ ಕೆಲವೊಂದು ಸಂದರ್ಭದಲ್ಲಿ ಮಾರ್ಗದರ್ಶಿಯೂ ಆಗಿ ಬದುಕಿದ ಅಪ್ರತಿಮ ಗುರು-ಶಿಷ್ಯರು, ಈ ಸಂಬಂಧ ಇತಿಹಾಸದಲ್ಲಿ ಚಿರಸ್ಥಾಯಿ.

ನೂತನ ಅನುಭವ ಮಂಟಪದ ನಿರ್ಮಾಣದಲ್ಲಿ ಭಾಲ್ಕಿಯ ದೊಡ್ಡಪ್ಪಗಳೊಂದಿಗೆ ಕಲ್ಲು ಮಣ್ಣು ಹೊತ್ತ ನಿಜ ಕಾಯಕ ಯೋಗಿಗಳು.ಸಂಸಾರಿ ಆಗಿದ್ದಾಗಲೂ ಶ್ರೀ ಚನ್ನಬಸವ ಪಟ್ಟದ್ದೇವರ ಅಣತಿಯಂತೆ ತನ್ನೂರು, ಮನೆ ತೊರೆದು ಅನುಭವ ಮಂಟಪದಲ್ಲಿ ಸುದೀರ್ಘ ಜೀವನದ 40 ವರ್ಷಗಳು ಇಲ್ಲಿ ಕಳೆದದ್ದು ಸೋಜಿಗವೆನಿಸುವಂಥದ್ದು.

ಅನುಭವ ಮಂಟಪದ ಸಂಚಾಲಕರಾಗಿ ಇಲ್ಲಿಯೇ ನೆಲೆ ನಿಂತವರು. ನಿತ್ಯ ಕಾಯಕ ಸಿದ್ಧಾಂತ ಪರಿಪಾಲಿಸುವ ಇವರು ಅನುಭವ ಮಂಟಪದ ಸುತ್ತಲೂ ಸುಮಾರು ದಿನಗಳವರೆಗೆ ಅವರು ಕೈಯಾರೆ ನೆಟ್ಟ ನೂರಾರು ಮಾವಿನ ಗಿಡಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಇಂದು ಫಲ ನೀಡುತ್ತಲಿವೆ. ಜೊತೆಗೆ ನಮ್ಮಂತಹ ಅನೇಕರ ಮನದಲ್ಲಿ ಅವರು ಬಿತ್ತಿದ ಬಸವ ಬೀಜ ಮೊಳಕೆ ಒಡೆದು ಮರವಾಗಿ ಬೆಳೆದು ನಿಂತಿದೆ.

ಅಪ್ಪಾಜಿ ಪಡೆದ ಶಿಕ್ಷಣ ಅತ್ಯಲ್ಪವಾದರೂ, ಅವರ ಜ್ಞಾನಕ್ಕೆ, ಎಣೆಯೇ ಇಲ್ಲ. ಅವರ ಬಸವ ಧರ್ಮದ ಅಧ್ಯಯನಶೀಲತೆಯಲ್ಲಿ ಅಪಾರ ಭಕ್ತಿ. ಅವರನ್ನು ಒಬ್ಬ ಉತ್ತಮ ಶರಣ ಸಾಹಿತಿ ವಾಗ್ಮಿಯನ್ನಾಗಿ ಮಾರ್ಪಡಿಸಿತು.

ಅವರು ರಚಿಸಿದ ಅನೇಕ ನಾಟಕಗಳು, ಭಕ್ತಿ ಗೀತೆಗಳು, ವಚನ ವಿಶ್ಲೇಷಣೆಯ ಪುಸ್ತಕಗಳು ಅವರ ಅಪಾರ ಬಸವ ಜ್ಞಾನಕ್ಕೆ ಹಿಡಿದ ಕನ್ನಡಿಗಳು.

ಅನುಭವ ಮಂಟಪದಲ್ಲಿ ಒಬ್ಬರೇ ಒಬ್ಬರು ಇಲ್ಲದಿದ್ದಾಗಲೂ ಸಮಯಕ್ಕೆ ಸರಿಯಾಗಿ ನಿತ್ಯ ಪ್ರಾರ್ಥನೆ ನೆರವೇರಿಸುವ ಅವರ ಪರಿ ವಿಶೇಷವಾದದ್ದು. ಇದನ್ನು ಪ್ರಶ್ನಿಸಿದಾಗ 770 ಅಮರಗಣಂಗಳು, ಲಕ್ಷದ 96 ಸಾವಿರ ಚರ ಜಂಗಮರು ಪಾಲ್ಗೊಂಡಿದ್ದಾರೆ ಎನ್ನುವ ಅವರ ಭಕ್ತಿಗೆ ಏನೆನ್ನಬೇಕು? ಒಂದು ಧರ್ಮ ಅಳವಡಿಸಿಕೊಂಡಾಗ ಇವರಂತಹ ಅನೂಹ್ಯ ಅನುಪಮ ಭಕ್ತಿ ಅಳವಡಬೇಕು. ಅವರು ರಚಿಸಿದ ಅನೇಕ ಭಕ್ತಿ ಗೀತೆಗಳು ಕರ್ನಾಟಕದಾದ್ಯಂತ ಪ್ರಚಲಿತಗೊಂಡು ಪ್ರತಿಯೊಂದು ಪ್ರವಚನ ಹಾಗೂ ಭಜನೆಯಲ್ಲಿ ಹಾಡಲ್ಪಡುತ್ತವೆ ಎಂದರೆ ಅದರ ಪ್ರಸಿದ್ದಿ ಎಷ್ಟು. ಬಸವ ಸಾಹಿತ್ಯದಲ್ಲಿ ಇವರ ಸಾಹಿತ್ಯವು ತನ್ನ ಸ್ಥಾನವನ್ನು ಪಡೆದುಕೊಂಡು ಒಂದಾಗಿದೆ.

ನಮ್ಮ ಯಜಮಾನರಾದ ಅಲ್ಲಮ ಪ್ರಭುಗಳೊಂದಿಗೆ ಆತ್ಮೀಯವಾದ ಕರುಳು ಬಳ್ಳಿಯ ಸಂಬಂಧ ನಿಜವಾಗಿಯೂ ಭಾವನಾತ್ಮಕವಾದದ್ದು. ನಮ್ಮ ಮದುವೆಯಾದ ನಂತರ ಅನೇಕ ವಾರ್ಷಿಕೋತ್ಸವಗಳು ಅನುಭವ ಮಂಟಪದಲ್ಲಿ ರಾತ್ರಿ ಅವರೊಂದಿಗುಳಿದು ಅವರ ಬಸವ ತತ್ವದ ಚಿಂತನ ಮಂಥನದೊಂದಿಗೆ ಆಚರಿಸಿಕೊಂಡದ್ದು ಈಗ ನೆನಪು ಮಾತ್ರ.

ಅವರಿಗೆ ನೂರರ ವಯಸ್ಸಾದಾಗ ವಚನ ಸಂಸ್ಥೆಯಿಂದ ಬೃಹತ್ ಮಟ್ಟದಲ್ಲಿ ಕಾರ್ಯಕ್ರಮ ಕೈಗೊಳ್ಳುವ ಮೂಲಕ ನಾಡಿನಾದ್ಯಂತ ಸಂಚಲನ ಮೂಡಿಸಿದ್ದು, ಅವರ ಕುರಿತಾಗಿ ನಮಗಿರುವ ಅಪಾರ ಪ್ರೀತಿ, ಭಕ್ತಿಗೆ ಸಾಕ್ಷಿಯಾಯಿತು.

ಅವರಿಗೆ ಒಂದು ಸಲ ಫೋನಾಯಿಸಿದಾಗ ನಮ್ಮ ಮಕ್ಕಳಿಂದ ವಚನ ಹೇಳಿಸದೇ ಬಿಡದವರು. ಕೇಳಿ ಅತ್ಯಂತ ಸಂಭ್ರಮಿಸುವವರು. ಮಕ್ಕಳೊಂದಿಗೆ ಮಕ್ಕಳಾಗಿ, ಜ್ಞಾನಿಗಳೊಂದಿಗೆ ಜ್ಞಾನಿಗಳಾಗಿ, ಬದುಕುವ ಇಂತಹ ಸರಳ ಜೀವಿ ವಿರಳಾತಿ ವಿರಳರು. ಶರಣರ ಆಗಮನಕ್ಕೆ ಗುಡಿ ತೋರಣ ಕಟ್ಟಿ ಸ್ವಾಗತಿಸಿ ಸಂಭ್ರಮಿಸುವ ಮನಸ್ಸದು.

ನನ್ನ ಮಗಳು ಚಿನ್ಮಯಿ ಗರ್ಭದಲ್ಲಿದ್ದಾಗ ಎಂಟನೆಯ ತಿಂಗಳಿನಲ್ಲಿ ಅವರ ಲಿಂಗ ಹಸ್ತದಿಂದ ದೀಕ್ಷೆ ಪಡೆದ ದಿನ ನನ್ನ ಜೀವನದಲ್ಲಿ ಎಂದೂ ಮರೆಯಲಾರದ ಅವಿಸ್ಮರಣೀಯ ಸಮಯ. ಲಿಂಗ ದೀಕ್ಷೆಯ ಸಂದರ್ಭದಲ್ಲಿ ಅವರ ಹಸ್ತ ನನ್ನ ಶಿರದ ಮೇಲೆ ಇಟ್ಟಾಗ ಆದ ಅನುಭೂತಿ, ರೋಮಾಂಚನಕಾರಿ, ವರ್ಣಿಸಲಸದಳ. ಅವರು ಪಡೆದ ತತ್ವಸಿದ್ಧಿಗೆ ಉದಾಹರಣೆಯಂತಿತ್ತು. ಅದಕ್ಕೆ ಪ್ರತಿಫಲದಂತೆಯೇ ಇರುವಳು ಮಗಳು ಚಿನ್ಮಯಿ.

ಅಪ್ಪಗಳು ಇಲ್ಲವಾದರೂ ಎಂದಾಗ ಒಂದು ಕ್ಷಣ ದಿಗ್ಭ್ರಮೆಗೊಂಡು ಅತ್ತಳು ಮಗಳು. ಅಂತಹ ಅವಿನಾಭಾವ ಸಂಬಂಧ ನಮ್ಮ ಮಕ್ಕಳೊಂದಿಗೆ ಇಟ್ಟುಕೊಂಡಿದ್ದರು ಅಪ್ಪಾಜಿ. ಬದುಕಿನುದ್ದಕ್ಕೂ ಒಂದು ಜವೆ ಕೊರತೆ ಬಾರದಂತೆ ಬಸವಣ್ಣನ ನಿಜ ಕಂದರಾಗಿ. ದೈಹಿಕವಾಗಿ ನಮ್ಮನ್ನಗಲಿದ್ದಾರೆ. ಆದರೆ ಅವರ ಬದುಕು ನಮ್ಮ ಜೀವನದಲ್ಲಿ ನಿತ್ಯವೂ ಪ್ರೇರಣಾದಾಯಿಯಾಗಿದೆ.

ಅದಕ್ಕೆ ಹೇಳಿರಬೇಕು, ಲಕ್ಷಕೊಬ್ಬ ಭಕ್ತ, ಕೋಟಿಗೊಬ್ಬ ಶರಣ, ಕೋಟಿಗೊಬ್ಬ ಶರಣರಂತೆ ನಮ್ಮ ನಡುವೆ ಇದ್ದು ಇಂದು ಇಲ್ಲವಾಗಿದ್ದಾರೆ. ಅವರ ಒಡನಾಟದಲ್ಲಿರುವ ನಮ್ಮ ಬದುಕು ಹಸನು. ಅಪಾರವಾದ ಬಸವ ಧರ್ಮದ ಜ್ಞಾನವನ್ನು ಹೊತ್ತುಕೊಂಡು ಹೋದಿರಿ.. ಎಂದೆಂದಿಗೂ ನೀವು ನಮ್ಮ ಮನದಲ್ಲಿ ಪರಮಪೂಜ್ಯರಾಗಿ ನೆಲೆಗೊಂಡಿರುವಿರಿ.

**ವಿ** ಶ್ವಕಲ್ಯಾಣ ಮಿಷನ್ ನ ಲಿಂಗಾನಂದ ಅಪ್ಪಾಜಿಗಳ ಸಾನ್ನಿಧ್ಯದಿಂದ ಪ್ರಾರಂಭಿಸಿದ ಬಸವ ಪಯಣ ಅನುಭವ ಮಂಟಪ ಬಸವ ಕಲ್ಯಾಣದ ಸಂಚಾಲಕರಾಗಿ ಡಾ. ಚನ್ನಬಸವ ಪಟ್ಟದ್ದೇವರ ಸತ್ಯ ಸಂಕಲ್ಪ ಪೂರೈಸಿದ ಶತಾಯುಷಿಗಳಿವರು.

**ಸಿ** ದ್ದರಾಗಿ, ಪರಿಶುದ್ಧರಾಗಿ, ಸಂಗೀತಗಾರರಾಗಿ ನೂರಾರು ಶರಣರ ವಚನಗಳು ನಿರರ್ಗಳ ವಾಗಿ ಹಾಡಿ ಇಡೀ ರಾಜ್ಯದ ಬಸವ ಮನಸ್ಸುಗಳನ್ನು ಸಂತೃಪ್ತಗೊಳಿಸಿದ ಬಸವ ಹೃದಯವಂತರಿವರು.

**ದ** ಯವೇ ಧರ್ಮ ಮೂಲವಯ್ಯ ಎಂಬ ವಚನದ ಮೇಲೆ ವೈಜ್ಞಾನಿಕವಾಗಿ ಪ್ರವಚನಗಳನ್ನು ಹೇಳಿ ಜನ ಸಾಮಾನ್ಯರಲ್ಲಿ ಬಸವ ಪ್ರಜ್ಞೆ ಮೂಡಿಸಿದ ಅಪರೂಪದ ವಿಚಾರವಂತರಿವರು.

**ರಾ** ಶಿಕೂಟ ಋಣ ಸಂಬಂಧ ಉಂಟೆಂದು ಹೇಳಿ ವೈದಿಕ ಸಂಪ್ರದಾಯಕ್ಕೆ ತಿಲಾಂಜಲಿ ನೀಡಿ ಬಸವ ಪರಿಸರ ನಿರ್ಮಿಸಲು ಶರಣ ನನ್ನಯ್ಯ ನಾಟಕದ ಮುಖಾಂತರ ಪಾದ ಯಾತ್ರೆ ರೂವಾರಿಗಳಿವರು.

**ಮ** ನದ ಮೈಲಿಗೆ ಕಳೆಯಲು ಶರಣರ ಸಂಘ, ಶರಣ ಸಂಗಮ, ಶರಣ ಕಮ್ಮಟ ಸಂಘಟಿಸಿದ ವೈಚಾರಿಕ ಕ್ರಾಂತಿಕಾರರು.

**ಣ** ನಕರಾತ್ಮಕ ವಿಚಾರಗಳನ್ನು ತೆಗೆದು ಹಾಕಿ, ಸಕರಾತ್ಮಕ ವಿಚಾರ ಯುವ ಜನಾಂಗದಲ್ಲಿ ನೆಲೆಗೊಳಿಸಲು ನೂರಾರು ಹಾಡು, ಹತ್ತಾರು ಗ್ರಂಥ ರಚಿಸಿದ ಶರಣ ಸಾಹಿತಿಗಳಿವರು.

**ನ** ಯ ವಿನಯ ತತ್ತ್ವ ನಿಷ್ಠೆ ಹಾಗೂ ಬಸವ ಚಳುವಳಿ ಹುಟ್ಟು ಹಾಕಲು ಅರವತ್ತು ವರ್ಷಗಳ ಕಾಲ ತನು ಮನ ಸಮಯ ದಾಸೋಹ ಮಾಡಿರುವ ಮತ್ತಿಹಳ್ಳಿ ಗ್ರಾಮದವರು.

**ವ** ಚನ ಸಾಹಿತ್ಯವೇ ಧರ್ಮ ಗ್ರಂಥ, ಅಪ್ಪ ಬಸವಣ್ಣನವರೇ ನಮ್ಮ ಧರ್ಮಗುರು, ೭೭೦ ಅಮರಗಣಂಗಗಳೇ ನಮ್ಮ ಪರಂಪರೆ ಎಂದು ಹೇಳಿದ ಅನುಭವ ಮಂಟಪ ಸಂಚಾಲಕರಿವರು.

**ರು** ಚಿ ಕಟ್ಟಾಗಿ ಮಾತನಾಡುವ ಶರಣರಿಗೆ ನೂರು ವರ್ಷ ಪೂರೈಸಿದಾಗ ಬೀದರನ ವಚನ ಸಮೂಹ ಸಂಸ್ಥೆಯು ಶತಮಾನೋತ್ಸವ ಸಂಭ್ರಮಾಚರಣೆ ಆಚರಿಸಲು ಅವಕಾಶ ಕಲ್ಪಿಸಿದವರು.

- ಶಿವಶಂಕರ ಟೋಕರೆ, ಬೀದರ.

# ಎಸ್‌ಜೆಎಂ ಶಾಲೆಯಲ್ಲಿ ಸಂತೆ



ದಾವಣಗೆರೆ, ಆ. 12- ಇಲ್ಲಿನ ವಿರಕ್ತಮಠದ ಎಸ್‌ಜೆಎಂ ಶಾಲೆಯಲ್ಲಿ ಮಕ್ಕಳಿಗಾಗಿ ಇಂದು ಏರ್ಪಡಿಸಿದ್ದ ಎಸ್‌ಜೆಎಂ ಸಂತೆ ಎಂಬ ವಿಶೇಷ ಕಾರ್ಯಕ್ರಮವನ್ನು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಉದ್ಘಾಟಿಸಿದರು.

ಸಮಾರಂಭದ ಕುರಿತು ಸ್ವಾಮೀಜಿ ಮಾತನಾಡಿ, ಮಕ್ಕಳಿಗೆ ಸಂತೆಯ ಪರಿಚಯವನ್ನು ಮಾಡಿಕೊಡುವ ಉದ್ದೇಶದಿಂದ ಈ ಸಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಶಾಲಾ ಪಾಠಗಳಲ್ಲಿ ತೂಕದ ಬಗ್ಗೆ ಪಾಠಗಳಿರುತ್ತವೆ. ಅದನ್ನು ಪ್ರಾಯೋಗಿಕವಾಗಿ ಅವರಿಗೆ ಮನದಟ್ಟು ಮಾಡಿಕೊಡಲು ಮಕ್ಕಳ ಸಂತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರು ಏರ್ಪಡಿಸಿದ್ದಾರೆ.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಮಕ್ಕಳಿಗೆ ಪರಿಚಯಿಸುವ ಕೆಲಸವನ್ನು ಶಿಕ್ಷಕರು ಮತ್ತು ಪೋಷಕರು ಮಾಡಬೇಕು. ಆಗ ಮಾತ್ರ ಸರ್ವಾಂಗೀಣವಾದ ಮಾಹಿತಿಯು ಮಕ್ಕಳಿಗೆ ದೊರಕುತ್ತದೆ. ಇಂತಹ ಮಾದರಿ ಪ್ರಯೋಗಗಳನ್ನು ವಿರಕ್ತ ಮಠದ ಎಸ್‌ಜೆಎಂ ಸ್ಕೂಲ್ ಮಾಡುತ್ತಿದೆ. ದಾವಣಗೆರೆ ಹಳೆಯ ಭಾಗದಲ್ಲಿ ಕಡಿಮೆ ಶುಲ್ಕದೊಂದಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ವಿರಕ್ತಮಠದ ಶಾಲೆ ನೀಡುವ ಕಾರ್ಯ ಮಾಡಿದೆ ಎಂದು ಸ್ವಾಮೀಜಿ ತಿಳಿಸಿದರು

ಮುಖ್ಯೋಪಾಧ್ಯಾಯ ರೋಷನ್ ಜಮೀರ್, ಶಿಕ್ಷಕರಾದ ಫಾರೂಖ್, ಜಗದೀಶ್, ಸಿದ್ದಲಿಂಗಸ್ವಾಮಿ, ಪ್ರದೀಪ್ ಇತರರು ಇದ್ದರು.

# ದಾವಿವಿ ವಿದ್ಯಾರ್ಥಿನಿ ತೇಜಸ್ವಿನಿಗೆ ಸಂಶೋಧನಾ ಪ್ರಶಸ್ತಿ




ದಾವಣಗೆರೆ, ಆ.12 ದಾವಣಗೆರೆ ವಿವಿ ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಡಿ.ಎಂ. ತೇಜಸ್ವಿನಿ ಅವರು ರಾಜಸ್ತಾನದ ಚರು ನಗರದ ಲೋಹಿಯಾ ಸರ್ಕಾರಿ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

'ನೀರಿನಲ್ಲಿರುವ ಆರ್ಸೆನಿಕ್ ಅಂಶವನ್ನು ಸುಲಭವಾಗಿ ಪತ್ತೆ ಮಾಡಲು ನಾನೊಫರ್ಟಿಟ್ ತಂತ್ರಜ್ಞಾನದ ಬಳಕೆ' ಕುರಿತು ತೇಜಸ್ವಿನಿ ಪ್ರಬಂಧ ಮಂಡಿಸಿದ್ದರು. ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಎಚ್.ಪಿ ನಾಗಸ್ವರೂಪ ಅವರ ಮಾರ್ಗದರ್ಶನ ಮತ್ತು ಜೈನ ಕಾಲೇಜಿನ ನಿರ್ದೇಶಕ ಪ್ರೊ.ಮಂಜಪ್ಪ ಸಾರಥಿ ಅವರ ಸಲಹೆಯಂತೆ ಪ್ರಬಂಧ ಸಿದ್ಧಪಡಿಸಿದ್ದರು. ತೇಜಸ್ವಿನಿ ಅವರನ್ನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ, ಕುಲಸಚಿವ ಪ್ರೊ.ಯು.ಎಸ್.ಮಹಾಬಲೇಶ್ವರ ಅವರು ಅಭಿನಂದಿಸಿದ್ದಾರೆ.

# ಬಾಂಗ್ಲಾ ಕೇಂದ್ರ ಬ್ಯಾಂಕ್‌ನ ಇಬ್ಬರು ಉಪಗವರ್ನರ್‌ಗಳ ರಾಜೀನಾಮೆ

ಢಾಕಾ, ಆ. 12 - ಬಾಂಗ್ಲಾದೇಶ ಬ್ಯಾಂಕ್‌ನ ಇಬ್ಬರು ಉಪಗವರ್ನರ್ ಹಾಗೂ ಹಣಕಾಸು ಗುಪ್ತಚರ ಸಂಸ್ಥೆಯ ಮುಖ್ಯಸ್ಥರು ರಾಜೀನಾಮೆ ನೀಡಿದ್ದಾರೆ. ಕೆಲ ದಿನಗಳ ಹಿಂದೆ ಬ್ಯಾಂಕ್ ಗವರ್ನರ್ ರಾಜೀನಾಮೆ ನೀಡಿದ್ದರು.

ಇವರ ಜೊತೆ ಕೇಂದ್ರ ಬ್ಯಾಂಕ್ ಸಲಹೆಗಾರರೂ ರಾಜೀನಾಮೆ ನೀಡಿದ್ದಾರೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ. ಶುಕ್ರವಾರದಂದು ಬಾಂಗ್ಲಾದೇಶ ಬ್ಯಾಂಕ್ ಗವರ್ನರ್ ಅಬ್ದುರ್ ರವೂಫ್ ತಾಲುಕ್ದರ್ ರಾಜೀನಾಮೆ ನೀಡಿದ್ದರು. ಶೇಖ್ ಹಸೀನಾ ಸರ್ಕಾರದ ಪತನದ ನಂತರ ಹಲವು ಉನ್ನತರು ರಾಜೀನಾಮೆ ನೀಡಿದ್ದಾರೆ. ಹಣಕಾಸು ಸಚಿವಾಲಯವು ಹಲವು ಅಧಿಕಾರಿಗಳ ರಾಜೀನಾಮೆ ನೀಡಲು ಸೂಚನೆ ನೀಡಿತ್ತು. ಅದರಂತೆ ಉಪ ಗವರ್ನರ್ ಕಾಜಿ ಸಯೀದುರ್ ರೆಹಮಾನ್ ಹಾಗೂ ಮೊಹಮ್ಮದ್ ಖುರ್ಷೀದ್ ಆಲಂ ಅವರು ರಾಜೀನಾಮೆ ನೀಡಿದ್ದಾರೆ. ಹಣಕಾಸು ಗುಪ್ತಚರ ಸಂಸ್ಥೆಯ ಮುಖ್ಯಸ್ಥ ಮಸೂದ್ ಬಿಸ್ವಾಸ್ ಹಾಗೂ ಬಾಂಗ್ಲಾದೇಶ್ ಬ್ಯಾಂಕ್ ಸಲಹೆಗಾರ ಅಬು ಫರಾಹ್ ನಸೀರ್ ರಾಜೀನಾಮೆ ನೀಡಿದ್ದಾರೆ.

# ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ಆನಗೋಡು ವ್ಯಾಪ್ತಿಯ ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಗ್ರಾಮ ಹಾಗೂ ಆರಾಧ್ಯಾ ಕೈಗಾರಿಕೆ, ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೊಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಂದಿತಾವರೆಯ ಸರ್ಕಾರಿ ಶಾಲೆಗೆ ಕ್ರೀಡಾ ಸಾಮಗ್ರಿ ವಿತರಣೆ



ಮಲೇಬೆನ್ನೂರು, ಆ.12- ನಂದಿತಾವರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಜೀವನ ಮುಕ್ತಿ ಫೌಂಡೇಷನ್ ವತಿಯಿಂದ ಕ್ರೀಡಾ ಸಾಮಗ್ರಿಗಳನ್ನು ಇತ್ತೀಚೆಗೆ ವಿತರಿಸಲಾಯಿತು.

ಟೆನಿಸ್ಕಾಟ್, ವಾಲಿಬಾಲ್, ಥ್ರೋ ಬಾಲ್, ಬ್ಯಾಡ್ಮಿಂಟನ್ ಬ್ಯಾಟ್, ಜಂಪಿಂಗ್ ರೂಪ್, ಕ್ರಿಕೆಟ್ ಬ್ಯಾಟ್ ಸೆಟ್ ಸೇರಿ ಇನ್ನೂ ಅನೇಕ ಆಟದ ಸಾಮಗ್ರಿಗಳನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಮಾತನಾಡಿದ ಅನುದಾನಿತ ಶಾಲಾ ನೌಕರರ ಒಕ್ಕೂಟದ ಅಧ್ಯಕ್ಷ ಕೆ.ಭೀಮಪ್ಪ ಅವರು, ಬೆಂಗಳೂರಿನ ವಿವಿಧ ಸಂಸ್ಥೆಯವರು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹಾಗೂ ಉತ್ತಮ ಕಲಿಕೆಗೆ ಪ್ರೋತ್ಸಾಹಿಸಿದ್ದಾರೆ. ಕೊಡುವವರ ಮನಸ್ಸು ಉದಾರವಿದ್ದಾಗ ನಮ್ಮ ಸರ್ಕಾರಿ ಶಾಲೆಗಳು ಪ್ರಗತಿಯತ್ತ ಹೆಜ್ಜೆ ಹಾಕುತ್ತೇವೆ ಎಂದು ಜೀವನ ಮುಕ್ತಿ ಸಂಸ್ಥೆಯ ಕೊಡುಗೆಯನ್ನು ಶ್ಲಾಘಿಸಿದರು. ಸಂಸ್ಥೆಯ ಕಿರಣ್ ಕುಮಾರ್, ರೂಪ, ಶಾಲಾ ಮುಖ್ಯ ಶಿಕ್ಷಕ ಬೀರಪ್ಪ, ಶಿಕ್ಷಕರಾದ ಮಂಜಪ್ಪ ಬಿದರಿ, ಶರಣು ಕುಮಾರ್, ರತ್ನಮ್ಮ, ಎಸ್.ಡಿ.ಎಂ.ಸಿ ಅಧ್ಯಕ್ಷ ರವಿರಾಜ್, ಸದಸ್ಯರಾದ ಬಿ.ಕೆ. ಪಾಟೀಲ್ ಹಾಗೂ ಇತರರು ಹಾಜರಿದ್ದರು.

# ಉಗಾಂಡ ರಾಜಧಾನಿಯಲ್ಲಿ ಕಸದ ರಾಶಿ ಕುಸಿದು 24 ಸಾವು

ಕಂಪಾಲಾ, ಆ. 12 - ಉಗಾಂಡಾದ ರಾಜಧಾನಿ ಕಂಪಾಲದಲ್ಲಿ ಕಸದ ರಾಶಿ ಕುಸಿದು 24 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಿಟೀಜಿ ಕಸ ವಿಲೇವಾರಿ ತಾಣದಲ್ಲಿ ಈ ಅವಘಡ ಸಂಭವಿಸಿದೆ. ಭಾರೀ ಮಳೆ ಕಾರಣದಿಂದಾಗಿ ಕಸದ ರಾಶಿ ಕುಸಿದಿದೆ ಎಂದು ಹೇಳಲಾಗುತ್ತಿದೆ. ವರ್ಷಗಳ ಹಿಂದೆಯೇ ಈ ಕಸದ ತಾಣ ಭರ್ತಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಆನಂತರವೂ ಪ್ರತಿದಿನ ನೂರಾರು ವಾಹನಗಳಲ್ಲಿ ಕಸವನ್ನು ತಂದು ಸುರಿಯಲಾಗುತ್ತಿದೆ. ಮಹಿಳೆಯರು ಹಾಗೂ ಮಕ್ಕಳು ಈ ಕಸದ ರಾಶಿಯಿಂದ ಪ್ಲಾಸ್ಟಿಕ್ ಇತ್ಯಾದಿಗಳನ್ನು ಆಯ್ದುಕೊಳ್ಳುತ್ತಾರೆ. ಕೆಲವರು ಸನಿಹದಲ್ಲೇ ಶಾಶ್ವತ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

# ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಪಡೆಯಲು ಅರ್ಜಿ ಆಹ್ವಾನ

ದಾವಣಗೆರೆ, ಜು. 12- ಪ್ರೌಢ ಶಾಲೆಯಿಂದ ಸ್ನಾತಕೋತ್ತರ ಪದವಿಯವರೆಗೆ ಹಾಗೂ ವೈದ್ಯಕೀಯ, ಇಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಂದ 2024-25ನೇ ಸಾಲಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು 2025 ರ ಜನವರಿ 31 ಕೊನೆಯ ದಿನ. ಮಾಹಿತಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ.48, 1ನೇ ಮತ್ತು 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು ಇಲ್ಲಿಗೆ ಖುದ್ದಾಗಿ ಭೇಟಿ ನೀಡಬಹುದು. ಅಥವಾ ದೂ.ಸಂ 080-23475188, 8277291175, 8277120505, 9141585402, 9141602562ಕ್ಕೆ ಕರೆ ಮಾಡಬಹುದು ಎಂದು ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ.

# ಆನ್‌ಲೈನ್‌ನಲ್ಲಿ ಇಂದು ಶರಣ ಚಿಂತನ ಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಹಡಪದ ಅಪ್ಪಣ್ಣ ಜಯಂತಿ ಅಂಗವಾಗಿ ಇಂದು ಸಂಜೆ 7 ರಿಂದ 9 ರವರೆಗೆ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ನಡೆಯಲಿದೆ.

ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ. ಶಶಿಕಾಂತ ಪಟ್ಟಣ ಅವರು ಹೊಸ ಜಗತ್ತಿಗೆ ಬಸವ ತತ್ವ ವಿಷಯವಾಗಿ ಅನುಭಾವದ ನುಡಿಗಳನ್ನಾಡುವರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಗೂಗಲ್ ಮೀಟ್ ಜಾಯನಿಂಗ್ ಇನ್ಫೋ ವಿಡಿಯೋ ಕಾಲ್ ಲಿಂಕ್:

https://meet.google.com/aum-ikxp-eod

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ ದಕ್ಷಿಣ 40×60 (59 ಲಕ್ಷ), 50x80 ಪಶ್ಚಿಮ ರೂ. 2465-00 ಅಡಿಗೆ, 40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ) 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
120 ರಸ್ತೆ, ಕಮರ್ಷಿಯಲ್ 40x60 ಉತ್ತರ (93 ಲಕ್ಷ)

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ
30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 6 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರಸಭೆ ಡೋ. ನಂ., ಬ್ಯಾಂಕ್ ಸಾಲ ಸೌಲಭ್ಯ ಸಿಗುತ್ತದೆ. ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**Property Hub**
• EC
• E-swathu
• Building Licence
• Khatha Change
96118 66449

**ಕಟ್ಟಡ ಬಾಡಿಗೆಗೆ ಇದೆ**
ಡಾಲರ್ಸ್ ಕಾಲೋನಿಯಲ್ಲಿ ಹಾಸ್ಟೆಲ್ / ನರ್ಸಿಂಗ್ ಹೋಂ ಪ್ರಾರಂಭಿಸಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ.
88674 46224

**ಸೈಟ್, ಮನೆ ಮಾರಾಟಕ್ಕೆ ಇದೆ**
40x60 ಡಾ. ಲೇಔಟ್ ಪಶ್ಚಿಮ, 30x40 ಎಸ್.ಎಸ್. ಬಡಾವಣೆ ಪಶ್ಚಿಮ, 40x40 ಹೊಸ ಮನೆ ಉತ್ತರ ಮಹಾಲಕ್ಷ್ಮಿ ಬಡಾವಣೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
96869 10106

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

**ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಕಲ್ಲೇಶ್ವರ ನಿಲಯ, 1ನೇ ಮಹಡಿ, 2ನೇ ಮಹಡಿ, (ಲಿಫ್ಟ್ ಸೌಲಭ್ಯ), ಕೆಳಮಹಡಿ ಮತ್ತು ATMಗೆ ಜಾಗ
99646 99096

**ಸೈಟುಗಳು ಮಾರಾಟಕ್ಕಿವೆ**
KHB ಸೈಟುಗಳು, ಬೇರೆ ಸೈಟುಗಳು, ಮನೆಗಳು, ಹೊಲಗಳು, ಚಿತ್ರದುರ್ಗದ ಹತ್ತಿರ, ಜೆ.ವಿ.ಗೆ 10 ಎಕರೆ ಜಮೀನು ಇದೆ.
ಏಜೆಂಟ್ B.G.S.
89707 10578

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 15 ಕಿ.ಮೀ. ಹತ್ತಿರದ ಹಿರೇತೊಗಲೇರಿ ಗ್ರಾಮದಲ್ಲಿ 5 ಎಕರೆ ಜಮೀನು, 3 ಬೋರ್ ಹೊಂದಿದೆ. ಬೆಲೆ 1 ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ರಸ್ತೆ,
ಮೊ. 82172 37969, 97413 48103, 99800 11448

**REQUIRED**
* Fitters
* Business Administration Qualification (MBA) HR
for furniture Showroom
Contact :
82967 09299

**ಮನೆ ಬಾಡಿಗೆಗೆ / ಲೀಸ್‌ಗಿದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ. 1 BHK (ಸಸ್ಯಹಾರಿಗಳಿಗೆ ಮಾತ್ರ)
94800 00417

**ಬೇಕಾಗಿದ್ದಾರೆ**
ಪ್ರಿಂಟಿಂಗ್ ಪ್ರೆಸ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಸ್ವಸ್ತಿಕ್ ಪ್ರಿಂಟರ್ಸ್, ದಾವಣಗೆರೆ.
98869 07375

**ಮನೆ ಬಾಡಿಗೆಗಿದೆ**
#174/A, 3ನೇ ಮೇನ್, 6ನೇ ಕ್ರಾಸ್, ಸಿ, ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
98442 15950

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸಪ್ಷನಿಸ್ಟ್ (ಮಹಿಳೆ)-1 ವಿದ್ಯಾರ್ಹತೆ : 10ನೇ/ಪಿಯುಸಿ ಟೈಲರಿಂಗ್ ಆದವರಿಗೆ ಆದ್ಯತೆ. ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1, ವಿದ್ಯಾರ್ಹತೆ : PUC ದ್ವಿ-ಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-12000
95915 01592

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**Job Opportunities**
Required Sales & Marketing Executives ( Male Only) for Software Industries. (Only BBA, B.Com., M.Com., MBA Candidates can apply)
97312 18567
Email : hardsoft@gmail.com

**Sri Nidhi Educational Trust (R)**
ನೇರ ಪರೀಕ್ಷೆಗಳು
SSLC, PUC, BA, B.Com, BCA, MA, M.Com, M.Sc, Diploma Course, BE, B.Tech, B.Lib, M.Lib, MBA, MCA & All Courses
77609 55550

**ವಾರದ ಚೀಟಿ ಪ್ರಾರಂಭ**
ಕಂತುಗಳಲ್ಲಿ 1400/- ರಿಂದ 2000/- ರೂಗಳು, 50 ಸದಸ್ಯರು, 50 ವಾರಗಳು. ಸಂಪರ್ಕಿಸಿ :
78997 75159

**WANTED**
Female teachers. B.Sc, B.Ed - 02
Aya - 02.
Contact:
95356 10817

**EON ELEVATORS PVT. LTD.**
Lift Sales & Service We undertake any brand lift service at reasonable price
Contact for lift AMC
97413 97006, 9448783332

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಜಗಳೂರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣಕ್ಕೆ ಸಮೀಪವಿರುವ, ಮೂರು ಕಡೆಗೂ ರಸ್ತೆ ಸಂಪರ್ಕವನ್ನು ಹೊಂದಿರುವ ಕಮರ್ಷಿಯಲ್ ಉಪಯೋಗಕ್ಕೆ ಬೇಕಾದ 23,312 ಚದರ ಅಡಿಯುಳ್ಳ, ಫೈನಲ್ ಅಪ್ರೂವಲ್ ಆಗಿರುವ ಕಾರ್ನರ್ ಸೈಟ್ ಮಾರಾಟಕ್ಕಿದೆ.
9606307471
82770 57777

**WANTED**
Diploma (All Branches) BE, (Mech, Electric, Civil) Office Staff & Marketing, Any Degree,
Seven Crore Elevators (Lift)
97404 61491

**VACANCY**
Delivery Boys /Part time work Vacancy available, Contact :
The Professional Couriers, 5th main Road, Behind Ganesha Temple, Ram and Co Circle , P.J. Extension, Davangere
88924 06748, 70194 54648

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
96860 22969

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಮಳಿಗೆ ಬಾಡಿಗೆಗಿದೆ Shop For Rent**
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್ ಗಳು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ : ವಾಟ್ಸಆಪ್ ನಂಬರ್ :
89711 19130
Call-98800 42597

**ಮಳಿಗೆ/ಗೋದಾಮು ಬಾಡಿಗೆ ಇದೆ**
ಡಿ.ಸಿ. ಆಫೀಸ್ ಹತ್ತಿರ, ಕರೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಮಳಿಗೆ/ಗೋದಾಮು ಬಾಡಿಗೆಗೆ ಇದೆ.
97394 68974

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿನಾಂಕ : 09.09.2024 ರಿಂದ 16.09.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ
ಅಕ್ಟೋಬರ್ 16 ರಿಂದ 26ರವರೆಗೆ
ಅಯೋಧ್ಯ-ನೇಪಾಳ ಪ್ರವಾಸ
ನಮ್ಮಲ್ಲಿ ಶಾಲಾ-ಕಾಲೇಜುಗಳಿಗೆ ಪ್ಯಾಕೇಜ್ ದರದಲ್ಲಿ ಪ್ರವಾಸ ಕೈಗೊಳ್ಳಲಾಗುತ್ತದೆ.
94485 33928, 90086 26473

**ಮನೆ ಬಾಡಿಗೆಗೆ ಇದೆ**
ಆಫೀಸ್ ಅಥವಾ ಪಿ.ಜಿ. ನಡೆಸಲು ಯೋಗ್ಯವಾದ, 4BHK ಮನೆ, ತರಳಬಾಳು ಬಡಾವಣೆ, 2ನೇ ಬಸ್ ಸ್ಟಾಪ್ ಹತ್ತಿರ.
98864 21010, 93536 68329

**10x15 SHOP FOR RENT**
Corner Building Beside Nandini Milk Parlour, Shivali Theatre Road. Contact :
8892406748,7019454648

# ಸಹಕಾರ ಭವನ ಕಟ್ಟಡ ನಿರ್ಮಾಣಕ್ಕೆ ಕೈ ಜೋಡಿಸಲು ಕರೆ

## ಜಿಲ್ಲಾ ಸಹಕಾರ ಯೂನಿಯನ್ನಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಜೆ.ಆರ್.ಷಣ್ಮುಖಪ್ಪ



ದಾವಣಗೆರೆ, ಆ. 12 - ಜಿಲ್ಲೆಯಲ್ಲಿ ಸಹಕಾರ ಭವನಕ್ಕೆ ಸ್ವಂತ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಜಿಲ್ಲೆಯ ಎಲ್ಲಾ ಸಹಕಾರಿಗಳು ಕೈ ಜೋಡಿಸಬೇಕು ಎಂದು ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಜೆ.ಆರ್.ಷಣ್ಮುಖಪ್ಪ ಕರೆ ನೀಡಿದರು.

ನಗರದ ಡಾ. ಸದ್ಯೋಜಾತ ಹಿರೇಮಠದಲ್ಲಿ ಇಂದು ನಡೆದ ಜಿಲ್ಲಾ ಸಹಕಾರ ಯೂನಿಯನ್‌ನ 2023-24 ನೇ ಸಾಲಿನ 21 ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಸಂಘಗಳ ಸುಗಮ ಕಾರ್ಯನಿರ್ವಹಣೆಗೆ ಉತ್ತಮ ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಹಾಗೂ ಜಿಲ್ಲಾ ಸಹಕಾರ ಒಕ್ಕೂಟ ಕಾಲ, ಕಾಲಕ್ಕೆ ಸಹಕಾರ ಸಂಘಗಳು ಅಳವಡಿಸಿಕೊಳ್ಳಬೇಕಾದ ವಿಷಯಗಳ ಕುರಿತು ಸಂಘಗಳ ಆಡಳಿತ ಮಂಡಳಿಯವರಿಗೆ ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡುತ್ತಾ ಬರುತ್ತಿದೆ ಎಂದರು.

ಜಿಲ್ಲೆಯಲ್ಲಿರುವ ಎಲ್ಲ ಸಹಕಾರ ಸಂಘಗಳು ಒಕ್ಕೂಟದಲ್ಲಿ ಸದಸ್ಯತ್ವ ಪಡೆಯುವುದರ ಮೂಲಕ ಒಕ್ಕೂಟವು ಸ್ವಂತ ಕಟ್ಟಡ ಸಹಕಾರ ಭವನ ನಿರ್ಮಾಣಕ್ಕೆ ಕೈ ಜೋಡಿಸಬೇಕೆಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮಾತನಾಡಿ, ಜಿಲ್ಲಾ ಸಹಕಾರ ಒಕ್ಕೂಟ ಪ್ರಾರಂಭಗೊಂಡು 21 ವರ್ಷ ತುಂಬುತ್ತಿದ್ದು, ಈ ಅವಧಿಯಲ್ಲಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರವನ್ನು ನಿರಂತವಾಗಿ ಮಾಡಿಕೊಂಡು ಬಂದಿದೆ ಎಂದರು.

ಜಿಲ್ಲೆಯ ಎಲ್ಲ ಸಹಕಾರ ಸಂಘಗಳಿಗೆ ಮಾತೃ ಸಂಸ್ಥೆಯಾಗಿ ಸಹಕಾರ ಯೂನಿಯನ್ ಕೆಲಸ ಮಾಡುತ್ತಿದೆ. ಇಂತಹ ಸಂಸ್ಥೆಗೆ ಸ್ವಂತ ಕಟ್ಟಡ ಸಹಕಾರ ಭವನ ನಿರ್ಮಾಣ ಮಾಡಲು ಆಡಳಿತ ಮಂಡಳಿ ಶ್ರಮಿಸುತ್ತಿದೆ. ಇದಕ್ಕೆ ಜಿಲ್ಲೆಯ ಎಲ್ಲ ಸಹಕಾರಿಗಳು ಸಹಕಾರ ನೀಡಬೇಕು. ಇದಕ್ಕಾಗಿ ಜಿಲ್ಲೆಯ ಸಮಸ್ತ ಸಹಕಾರಿಗಳು, ಎಲ್ಲಾ ವಿಧದ ಸಹಕಾರ ಸಂಘಗಳು, ಬ್ಯಾಂಕ್‌ಗಳು ಮಾರ್ಗ ದರ್ಶನ ಹಾಗೂ ಧನ ಸಹಾಯ ಮಾಡಲು ಮನವಿ ಮಾಡಿದರು. ಸಹಕಾರ ಭವನ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಆಡಳಿತ ಮಂಡಳಿ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ದೂಡಾದಿಂದ ನಿವೇಶನ ಕೊಡಿಸುವ ಭರವಸೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷ ಬೇತೂರು ಟಿ.ರಾಜಣ್ಣ, ನಿರ್ದೇಶಕ ಎಸ್.ಬಿ.ಶಿವಕುಮಾರ್, ಆರ್.ಜಿ.ಶ್ರೀನಿವಾಸ ಮೂರ್ತಿ, ಡಿ.ಎಂ. ಮುರುಗೇಂದ್ರಯ್ಯ, ಕೆ.ಜಿ.ಸುರೇಶ್, ಎಸ್.ಜಿ.ಪರಮೇಶ್ವರಪ್ಪ, ಶ್ರೀಮತಿ ಅನ್ನಪೂರ್ಣ, ಡಿ.ಶಿವಗಂಗಮ್ಮ, ವೃತ್ತಿಪರ ನಿರ್ದೇಶಕರಾದ ಎಂ.ವಿ.ರಾಜ್, ಎನ್.ಎಂ. ಹಾಲಸ್ವಾಮಿ ಉಪಸ್ಥಿತರಿದ್ದರು. ಕೆ.ಜಿ.ಸುರೇಶ್ ಸ್ವಾಗತಿಸಿದರು.

## ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆ ನಗರದ ಸಂತೋಷ್ ಪ್ರಥಮ




ದಾವಣಗೆರೆ, ಆ. 12 - ಬೆಂಗಳೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ನಗರದ ಎಸ್.ಎಸ್. ಫಿಟ್‌ನೆಸ್ ಅಂಡ್ ಯೋಗ ಸ್ಪೋರ್ಟ್ಸ್‌ನ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ತರಬೇತುದಾರ ಡಿ. ಸಂತೋಷ್ ಪ್ರಥಮ ಸ್ಥಾನ ಪಡೆದಿದ್ದಾರೆ.

ಪತಂಜಲಿ ಯೋಗ ಕೇಂದ್ರ ಮತ್ತು ಡಿ.ವಿ.ಜಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವೇದಿಕೆ, ಬೆಂಗಳೂರು ವತಿಯಿಂದ ಇಂಟರ್ ಸ್ಕೂಲ್ ಮತ್ತು ಕಾಲೇಜು ಹಂತದ ರಾಷ್ಟ್ರಮಟ್ಟದ ಯೋಗಾಸನ ಚಾಂಪಿಯನ್‌ಶಿಪ್-2024 ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ ಎಸ್.ಎಸ್. ಫಿಟ್‌ನೆಸ್ ಅಂಡ್ ಯೋಗ ಸ್ಪೋರ್ಟ್ಸ್ ಸಂಸ್ಥೆಯ ಕ್ರೀಡಾ ವಿದ್ಯಾರ್ಥಿಗಳಾದ ಅದ್ವಿಕಾ.ಟಿ ಪ್ರಥಮ ಸ್ಥಾನ (ಸಿದ್ಧಗಂಗಾ ಶಾಲೆ), ಸಂಜಯ್. ಎಸ್. ನಾಲ್ಕನೇ ಸ್ಥಾನ (ಶ್ರೀ ಗುರುಕುಲ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್, ತುರ್ಚಘಟ್ಟ), ಸೂರ್ಯ ಎಸ್. ಐದನೇ ಸ್ಥಾನ (ಸೋಮೇಶ್ವರ ವಿದ್ಯಾಲಯ, ನಿಟುವಳ್ಳಿ) ಪಡೆದುಕೊಂಡಿದ್ದರೆ, ಹಿರಿಯರ ವಿಭಾಗದಲ್ಲಿ, ಹನುಮಂತಪ್ಪ ಕ್ಷೀರಸಾಗರ ಶಾಲೆ ಪ್ರಥಮ ಸ್ಥಾನ ಪಡೆದಿದೆ.

## ಬಾಂಗ್ಲಾ ಹಿಂದೂಗಳಿಗೆ ಸುರಕ್ಷತೆ ನೀಡುವಂತೆ ಹಿತರಕ್ಷಣಾ ಸಮಿತಿ ಆಗ್ರಹ

ದಾವಣಗೆರೆ, ಆ.12- ಬಾಂಗ್ಲಾ ದೇಶದ ಹಿಂದೂಗಳ ಮೇಲಾಗುತ್ತಿರುವ ಹಿಂಸಾತ್ಮಕ ಆಕ್ರಮಣವನ್ನು ವಿರೋಧಿಸಿ ನಗರದ ಆರ್.ಎಚ್.ಛತ್ರದ ಮುಂಭಾಗ ಹಿಂದೂ ಹಿತರಕ್ಷಣಾ ಸಮಿತಿಯ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿದರು.

ಬಾಂಗ್ಲಾ ದೇಶದ ಹಿಂದೂಗಳ ಸುರಕ್ಷತೆಗಾಗಿ ಭಾರತ ಸರ್ಕಾರ ಸಹಿತ ವಿಶ್ವ ಸಮುದಾಯವು ಬಾಂಗ್ಲಾ ದೇಶದ ಸರ್ಕಾರಕ್ಕೆ ಒತ್ತಾಯಿಸಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ವೇಳೆ ಸಮಿತಿಯ ಸಂಚಾಲಕ ಸತೀಶ್ ಪೂಜಾರಿ, ಸಹ ಸಂಚಾಲಕ ಸಿ.ಎಸ್. ರಾಜು, ಮಲ್ಲಿಕಾರ್ಜುನ್, ಯೋಗೇಶ್, ವೀರೇಶ್, ಮನು, ಗಜಾ ಸಂತೋಷ್, ಶಿವಾಜಿ, ಹರೀಶ್, ಜಾಗರಣ ವೇದಿಕೆಯ ವೀರೇಶ್ ಮತ್ತಿತರರಿದ್ದರು.

## ಸ್ವಂತ ಹಣದಲ್ಲಿ ರಸ್ತೆಗೆ ಗ್ರಾವಲ್ ಹಾಕಿಸಿದ ಅಧಿಕಾರಿಗಳು



ಮಲೇಬೆನ್ನೂರು, ಆ. 12 - ಪಟ್ಟಣದಲ್ಲಿ ರೈತ ಸಂಪರ್ಕ ಕೇಂದ್ರ ಮತ್ತು ನಾಡ ಕಛೇರಿ ಹಾಗೂ ಹಾಸ್ಟೆಲ್, ಶಾಲಾ-ಕಾಲೇಜುಗಳಿಗೆ ಹೋಗುವ ರಸ್ತೆ ಮಳೆ ಬಂದಾಗ ಕೆಸರಿನ ಗದ್ದೆಯಂತೆ ಆಗುತ್ತಿತ್ತು. ಇದರಿಂದಾಗಿ ಇಲ್ಲಿ ಓಡಾಡುವ ಜನರು ಮತ್ತು ವಿದ್ಯಾರ್ಥಿಗಳು ಎದ್ದು-ಬಿದ್ದು ಹಿಂಸೆ ಪಟ್ಟುಕೊಳ್ಳುತ್ತಿದ್ದರು. ಈ ಬಗ್ಗೆ ಪತ್ರಿಕೆಗಳಲ್ಲೂ ವರದಿ ಆಗಿದ್ದವು. ಈ ಬಗ್ಗೆ ಪುರಸಭೆ ಗಮನ ಹರಿಸದಿದ್ದಾಗ ಸಾರ್ವಜನಿಕರ ಹಿತದೃಷ್ಟಿಯಿಂದ ಉಪ ತಹಶೀಲ್ದಾರ್ ಆರ್ ರವಿ, ಗ್ರಾಮ ಆಡಳಿತ ಅಧಿಕಾರಿ ಅಣ್ಣಪ್ಪ, ಕೃಷಿ ಅಧಿಕಾರಿ ಇನಾಯತ್ ಅವರುಗಳು ತಮ್ಮ ಸ್ವಂತ ಹಣದಲ್ಲಿ ಕೆಂಪು ಮಣ್ಣಿನ ಗ್ರಾವಲ್ ಅನ್ನು ರಸ್ತೆಗೆ ತಾತ್ಕಾಲಿಕವಾಗಿ ಹಾಕಿಸುವ ಮೂಲಕ ಮಾನವೀಯತೆ ಮೆರೆದರು. ಅಧಿಕಾರಿಗಳ ಈ ಕಾಳಜಿ ಬಗ್ಗೆ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

## ಸಿದ್ದರಾಮಣ್ಣ ಶರಣರ ನಿಧನಕ್ಕೆ ಪಾಂಡೋಮಟ್ಟಿ ಶ್ರೀಗಳ ಸಂತಾಪ



ದಾವಣಗೆರೆ, ಆ. 12 - ನಾಡಿನ ಹಿರಿಯ ಅನುಭಾವಿ ಶರಣರಾದ ವಿ. ಸಿದ್ದರಾಮಣ್ಣ ನಿಧನಕ್ಕೆ ಪಾಂಡೋಮಟ್ಟಿ ಶ್ರೀ ಗುರುಬಸವ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಣ್ಣ ಶರಣರು ಪಾಂಡೋಮಟ್ಟಿ ವಿರಕ್ತ ಮಠದ ಜೊತೆ ನಿಕಟ ಸಂಪರ್ಕ ಹೊಂದಿದ್ದರು. ಹಲವಾರು ಬಸವ ತತ್ವಜ್ಞಾನದ ಗ್ರಂಥಗಳನ್ನು ರಚಿಸಿದ್ದರು. ಶರಣರ ಚರಿತ್ರೆಯ ನಾಟಕಗಳನ್ನು ರಚಿಸಿ, ನಿರ್ದೇಶನ ಮಾಡಿದ ಅವರು ಈ ನಾಡು ಕಂಡ ಅಪರೂಪದ ಅನುಭಾವಿಗಳಾಗಿದ್ದರು. ಶಿವಯೋಗ ಸಾಧಕರು, ಅನುಪಮ ಪ್ರವಚನಕಾರರಾಗಿದ್ದರು ಎಂದು ಶರಣರ ಸಾಧನೆಯನ್ನು ಗುರು ಬಸವ ಶ್ರೀಗಳು ಸ್ಮರಿಸಿದ್ದಾರೆ.

## ಗ್ರಾ.ಪಂ. ಅಧ್ಯಕ್ಷರಾಗಿ ಶೀಲಾಬಾಯಿ, ಉಪಾಧ್ಯಕ್ಷೆ ಶ್ರೀದೇವಿ ಆಯ್ಕೆ





ದಾವಣಗೆರೆ, ಆ. 12 - ತಾಲ್ಲೂಕು ಶ್ರೀರಾಮನಗರ ಗ್ರಾಮ ಪಂಚಾಯತಿಯಲ್ಲಿ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀಮತಿ ಶೀಲಾಬಾಯಿ ಕೋಂ ರಾಜಾನಾಯ್ಕ, ಉಪಾಧ್ಯಕ್ಷರಾಗಿ ಶ್ರೀದೇವಿ ಕೋಂ ಹೆಚ್. ರಾಜುನಾಯ್ಕ ನೇಮಕಗೊಂಡಿದ್ದು, ಅಧಿಕಾರಿ ಶ್ರೀಮತಿ ರೇಷ್ಮಾಪರ್ವಿನ್ ಟಿ.ಹೆಚ್., ಸದಸ್ಯರಾದ ಶ್ರೀಮತಿ ಲಕ್ಷ್ಮಿ ಬಾಯಿ, ವಿನೋದ್ ಕುಮಾರ್ ಪರಮೇಶನಾಯ್ಕ ಹಾಜರಿದ್ದರು.

## ವಿದ್ಯಾರ್ಥಿಗಳಿಗೆ ಪ್ರಬಂಧ, ಚರ್ಚಾ ಸ್ಪರ್ಧೆ

ದಾವಣಗೆರೆ, ಆ. 12 - ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ,ಸಹಕಾರ ಇಲಾಖೆ, ಶಾಲಾ ಶಿಕ್ಷಣ - ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಹಯೋಗದೊಂದಿಗೆ ಜಿಲ್ಲಾ ಮಟ್ಟದಲ್ಲಿ ಪ್ರೌಢಶಾಲೆ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಪ್ರಬಂಧ ಸ್ಪರ್ಧೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಚರ್ಚಾ ಸ್ಪರ್ಧೆಯನ್ನು ಇದೇ ದಿನಾಂಕ 20 ರಂದು ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.

ಪ್ರಬಂಧ ಸ್ಪರ್ಧೆ ಮತ್ತು ಚರ್ಚಾ ಸ್ಪರ್ಧೆಗಳು ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಚರ್ಚಾ ಸ್ಪರ್ಧೆ ವಿಷಯ ಸಹಕಾರ ವಲಯದ ಪ್ರಾಥಮಿಕ ಸಂಘಗಳ ಬಲವರ್ಧನೆಯಿಂದ ಮಾತ್ರವೇ ಸಹಕಾರ ಚಳವಳಿ ಸದೃಢಗೊಳ್ಳಬಲ್ಲದು. ಪ್ರಬಂಧ ಸ್ಪರ್ಧೆ : ಮಹಿಳಾ ಸಬಲೀಕರಣ ಮತ್ತು ಸಹಕಾರ ಸಂಸ್ಥೆಗಳ ಕುರಿತು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಲಪ್ಪ ಕೋಡಿಹಳ್ಳಿ ತಿಳಿಸಿದ್ದಾರೆ.

## ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟಗಾರರ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಣೆ



ದಾವಣಗೆರೆ, ಆ. 12 - ಭದ್ರಾ ಜಲಾಶಯಕ್ಕೆ ದಾವಣಗೆರೆ ತಾಲ್ಲೂಕು ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟಗಾರರ ಸಂಘದ ವತಿಯಿಂದ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಇಂದು ಬಾಗಿನ ಅರ್ಪಿಸಲಾಯಿತು. ತಾಲ್ಲೂಕು ಅಧ್ಯಕ್ಷ ಮಂಜಪ್ಪ, ಪ್ರಧಾನ ಕಾರ್ಯದರ್ಶಿ ಎ.ಬಿ. ಸೋಮಶೇಖರ್, ಉಪಾಧ್ಯಕ್ಷರುಗಳಾದ ಶಿವಣ್ಣ, ರವಿಕುಮಾರ್, ಕಾರ್ಯದರ್ಶಿ ಸಮೃದ್ಧಿ ಸುರೇಶ್, ಖಜಾಂಚಿ ಕಿರಣ್ ಬಾಳೆಹೊಲದ, ವಾಸವಿ ಲಕ್ಷ್ಮಿ ನಾರಾಯಣ ಶೆಟ್ರು, ಆರ್.ಜಿ. ಶ್ರೀನಿವಾಸ್ ಮೂರ್ತಿ, ವಿ.ಪಿ. ಕೃಷ್ಣಮೂರ್ತಿ ಮತ್ತು ಇತರರ ನೇತೃತ್ವದಲ್ಲಿ ಸರ್ವ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ತಾಲ್ಲೂಕು ನಾಯಕ ಸಂಘಕ್ಕೆ ಆಯ್ಕೆ






ದಾವಣಗೆರೆ, ಆ. 12 - ತಾಲ್ಲೂಕು ನಾಯಕ ಸಂಘದ ಗೌರವ ಅಧ್ಯಕ್ಷರಾಗಿ ಅಣ್ಣಾಪುರ ಹೇಮಣ್ಣ ಹಾಗೂ ಖಜಾಂಚಿಯಾಗಿ ನಲ್ಕುಂದ ಗ್ರಾಮದ ಪ್ಯಾಟೆ ಹನುಮಪ್ಪ ಅವರನ್ನು ನೇಮಕ ಮಾಡಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ.ಬಿ. ಹಾಲಪ್ಪ ವಹಿಸಿದ್ದರು.

## ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮೊಹಮ್ಮದ್‌ಗೆ ಚಿನ್ನ



ದಾವಣಗೆರೆ, ಆ.12- ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಇಂಟರ್ ನ್ಯಾಷನಲ್ ಓಪನ್ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ನಗರದ ಅಮೃತ ವಿದ್ಯಾಲಯದ 6ನೇ ತರಗತಿ ವಿದ್ಯಾರ್ಥಿ ಎ. ಮೊಹಮ್ಮದ್ ಹುಝೈಫಾ ಪ್ರಥಮ ಸ್ಥಾನ ಗಳಿಸಿದ್ದಾರೆ.

## 10ಕಿ.ಮೀ ಓಟ ಸ್ಪರ್ಧೆಯಲ್ಲಿ ಯೋಧ 16ನೇ ಸ್ಥಾನ



ದಾವಣಗೆರೆ, ಆ.12- ಬಳ್ಳಾರಿಯ ಜೆ.ಎಸ್.ಡಬ್ಲ್ಯೂ ಸ್ಟೀಲ್ ಸಿಟಿಯಿಂದ ಈಚೆಗೆ ಆಯೋಜಿಸಿದ್ದ 10 ಕಿ.ಮೀ ಗುಡ್ಡಗಾಡು ಓಟದ ಕ್ರೀಡಾ ಕೂಟದಲ್ಲಿ ನಗರದ ಬಿಎಸ್‌ಎಫ್ ಯೋಧ ಮಹಮ್ಮದ್ ರಫೀ ಭಾಗವಹಿಸಿ, ಒಟ್ಟು 396 ಸ್ಪರ್ಧಾಳುಗಳಲ್ಲಿ 16ನೇ ಸ್ಥಾನ ಪಡೆದಿದ್ದಾರೆ.

## ಸರ್ವಧರ್ಮ ವಧು-ವರರ ಸಮಾವೇಶ

ದಾವಣಗೆರೆ, ಆ.12- ಸ್ವಪ್ನ ಎಜುಕೇಶನ್ ಟ್ರಸ್ಟ್ ವತಿಯಿಂದ ಸರ್ವಧರ್ಮ ವಧು-ವರರ ಸಮಾವೇಶವನ್ನು ಸಂಘಟಿಸಲಾಗುತ್ತಿದ್ದು, ಆಸಕ್ತರು ಇದೇ ದಿನಾಂಕ 15ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಟ್ರಸ್ಟ್ ಅಧ್ಯಕ್ಷ ಟಿ. ನಾರಾಯಣರಾವ್ ತಿಳಿಸಿದರು. ವಿವರಕ್ಕೆ ಸಂಪರ್ಕಿಸಿ : 886138237, 7975023609.

## ಪ್ರೊ ಕಬಡ್ಡಿ: ಬೆಂಗಳೂರು ಬುಲ್ಸ್ ತಂಡಕ್ಕೆ ಚಂದ್ರನಾಯಕ್ ಆಯ್ಕೆ



ದಾವಣಗೆರೆ, ಆ.12- ಜಿಲ್ಲೆಯ ರಾಷ್ಟ್ರೀಯ ಕಬಡ್ಡಿ ಆಟಗಾರ ಎಂ. ಚಂದ್ರನಾಯಕ್ ಪ್ರೊ ಕಬಡ್ಡಿ ಲೀಗ್ ಸೀಸನ್ 11 ಆವೃತ್ತಿಯಲ್ಲಿ ಪಾಲ್ಗೊಳ್ಳುವ ಬೆಂಗಳೂರು ಬುಲ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಅವರನ್ನು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಅಧ್ಯಕ್ಷ ಎಂ.ನಾಗರಾಜ್, ಕಾರ್ಯದರ್ಶಿ ಎಂ.ನಾರಾಯಣ ಸ್ವಾಮಿ ಮತ್ತು ಕ್ರೀಡಾಪಟುಗಳು ಅಭಿನಂದಿಸಿದ್ದಾರೆ.

## ಧರಾಮ ಕಾಲೇಜು ಹಳೆ ವಿದ್ಯಾರ್ಥಿಗಳಿಗೆ ಸದಸ್ಯತ್ವಕ್ಕೆ ಆಹ್ವಾನ

ದಾವಣಗೆರೆ, ಆ.12- ನಗರದ ಧರಾಮ ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಸಹಕಾರ ನೀಡುವಂತೆ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ವಿವರಕ್ಕೆ ಮೊ: 96113 90375, 9448551452, 9980282121 ಸಂಪರ್ಕಿಸಬಹುದು.

## ಸಿದ್ದರಾಮಣ್ಣ ನಿಧನಕ್ಕೆ ಜಿಲ್ಲಾ ಕಸಾಪ ಶೋಕ

ದಾವಣಗೆರೆ, ಆ. 12 - ನಾಡಿನ ಹಿರಿಯ ಅನುಭಾವಿ ಶರಣ ವಿ. ಸಿದ್ದರಾಮಣ್ಣ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಶೋಕ ವ್ಯಕ್ತಪಡಿಸಿದ್ದಾರೆ.

## ರಾಜ್ಯದ 6 ರಂಗಾಯಣಗಳಿಗೆ ನಿರ್ದೇಶಕರ ನೇಮಕ

ಬೆಂಗಳೂರು, ಆ. 12 - ರಾಜ್ಯದ ಆರು ರಂಗಾಯಣಗಳಿಗೆ ನಿರ್ದೇಶಕರನ್ನು ನೇಮಕ ಮಾಡಲಾಗಿದೆ. ಆ ಮೂಲಕ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ರಾಜ್ಯದ ರಂಗಭೂಮಿ ಚಟುವಟಿಕೆಗಳಿಗೆ ದೊಡ್ಡ ಮಟ್ಟದಲ್ಲಿ ಚಾಲನೆ ನೀಡಿದ್ದಾರೆ.

ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕರಾಗಿ ಮಲ್ಲಿಕಾರ್ಜುನ ಕಡಕೋಳ ಅವರನ್ನು ನೇಮಿಸಲಾಗಿದೆ.

ಮೈಸೂರು ರಂಗಾಯಣದ ನಿರ್ದೇಶಕರಾಗಿ ಸತೀಶ್ ತಿಪಟೂರು, ಧಾರವಾಡ ರಂಗಾಯಣದ ನಿರ್ದೇಶಕರಾಗಿ ರಾಜು ತಾಳಿಕೋಟೆ, ಶಿವಮೊಗ್ಗ ರಂಗಾಯಣದ ನಿರ್ದೇಶಕರಾಗಿ ಪ್ರಸನ್ನ ಡಿ. ಸಾಗರ, ಕಲಬುರ್ಗಿ ರಂಗಾಯಣದ ನಿರ್ದೇಶಕರಾಗಿ ಡಾ. ಸುಜಾತ ಜಂಗಮ ಶೆಟ್ಟಿ ಅವರನ್ನು ನೇಮಿಸಲಾಗಿದೆ. ಕಾರ್ಕಳದ ಯಕ್ಷರಂಗಾಯಣ ನಿರ್ದೇಶಕರಾಗಿ ವೆಂಕಟರಮಣ ಐತಾಳ ಇವರನ್ನು ನೇಮಕ ಮಾಡಲಾಗಿದೆ ಎಂದು ಸಚಿವ ತಂಗಡಗಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಪುಸ್ತಕಗಳ ಪರಿಚಯ

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವತಿಯಿಂದ 'ಚಂದ್ರಶೇಖರ ಆಜಾದ್' ಜೀವನ ಆಧಾರಿತ ಕಾದಂಬರಿ 'ಅಜೇಯ'ದ ಸುವರ್ಣ ಸಂಭ್ರಮ ಮತ್ತು 'ವಾಸುದೇವ ಬಲವಂಥ ಫಡಕೆ' ಜೀವನ ಆಧಾರಿತ ಕಾದಂಬರಿ 'ಅದಮ್ಯ'ಕ್ಕೂ ನಲವತ್ತು ವರ್ಷ! ಪುಸ್ತಕಗಳ ಪರಿಚಯ ಮತ್ತು ಲೇಖಕ ಡಾ. ಬಾಬು ಕೃಷ್ಣಮೂರ್ತಿ ಅವರಿಗೆ ಅಭಿನಂದನಾ ಕಾರ್ಯಕ್ರಮವು ಇಂದು ಸಂಜೆ 5.30ಕ್ಕೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿವೇಕ ಸಭಾಂಗಣದಲ್ಲಿ ಜರುಗಲಿದೆ.

## ಬೇತೂರು ಕರಿಬಸಪ್ಪ ಅವರಿಗೆ ಗ್ರಾಮಸ್ಥರಿಂದ ಶ್ರದ್ಧಾಂಜಲಿ



ದಾವಣಗೆರೆ, ಆ. 12 - ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರೂ, ಡಿಸಿಸಿ ಬ್ಯಾಂಕ್ ನಿರ್ದೇಶಕರೂ ಆದ ಬಿ. ಕರಿಬಸಪ್ಪ ಅವರಿಗೆ ಪಕ್ಷಾತೀತ - ಜಾತ್ಯಾತೀತವಾಗಿ ಗ್ರಾಮದ ಹಿರಿಯರು - ಕಿರಿಯರು ಎಲ್ಲರೂ ಸೇರಿ ಇಂದು ಶ್ರದ್ಧಾಂಜಲಿ ಸಲ್ಲಿಸಿದರು. ಕರಿಬಸಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೇಣದ ಬತ್ತಿ ದೀಪ ಬೆಳಗಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಗ್ರಾಮದ ಹಿರಿಯ ಎಚ್. ಬಸವರಾಜಪ್ಪ ಹಾಗೂ ಇತರರು ಮಾತನಾಡಿ, ಕರಿಬಸಪ್ಪ ಅವರು ಗ್ರಾಮಕ್ಕೆ ಮಾಡಿದ ಸೇವೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಸ್ಮರಿಸಿದರು.


## ಬಾಂಗ್ಲಾದಲ್ಲಿ ಹಿಂದೂಗಳ ರಕ್ಷಣೆಗಾಗಿ ಕಾಂಗ್ರೆಸ್ ಒತ್ತಾಯ

ದಾವಣಗೆರೆ, ಆ. 12 - ಬಾಂಗ್ಲಾದಲ್ಲಿ ನಡೆಯುತ್ತಿರುವ ಅಂತರ್ ಯುದ್ಧದಲ್ಲಿ ಭಾರತೀಯ ಹಿಂದೂಗಳ ರಕ್ಷಣೆ ಮಾಡಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಕೆ.ಶೆಟ್ಟಿ, ಕೆ.ಜಿ. ಶಿವಕುಮಾರ್, ಎ.ನಾಗರಾಜ್, ಎಸ್.ಮಲ್ಲಿಕಾರ್ಜುನ್ ಅವರುಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ನಗರದಲ್ಲಿ ಇಂದು ಹರ್ ಘರ್ ತಿರಂಗಾ ಜಾಥಾ

ಹರ್ ಘರ್ ತಿಂರಂಗಾ ಕಾರ್ಯಕ್ರಮದ ಅಂಗವಾಗಿ ದಾವಣಗೆರೆ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಜಿಲ್ಲಾಡಳಿತ ಭವನದವರೆಗೆ ಇಂದು ಮಧ್ಯಾಹ್ನ 2 ರಿಂದ 3 ರವರೆಗೆ ಹರ್ ಘರ್ ತಿರಂಗಾ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಭಿಕುಮಾರ್ ತಿಳಿಸಿದ್ದಾರೆ.

## ಶುದ್ಧ ಸಾಧುಗಳೇ ಆಗಿದ್ದ ಸಿದ್ದರಾಮ ಶರಣರಂತವರ ಸಂತತಿ ಮತ್ತೆ ಉದಯಿಸಲಿ



ಸಾಣೇಹಳ್ಳಿ, ಆ.12- ದಾವಣಗೆರೆ ಬಸವ ಬಳಗದ ಶ್ರೀ ಸಿದ್ದರಾಮ ಶರಣರ ನಿಧನಕ್ಕೆ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಂಬನಿ ಮಿಡಿದಿದ್ದಾರೆ.

ಶ್ರೀ ಸಿದ್ಧರಾಮ ಶರಣರು ಬಸವ ಕಲ್ಯಾಣವನ್ನೇ ತಮ್ಮ ಕೇಂದ್ರವಾಗಿಸಿಕೊಂಡು ಕಲ್ಯಾಣ ನಾಡಿನಲ್ಲಿ ಬಸವ ತತ್ವದ ಪ್ರಚಾರಕ್ಕೆ ಟೊಂಕ ಕಟ್ಟಿ ನಿಂತವರು. ಆಳವಾದ ಅಧ್ಯಯನವಿತ್ತು. ಶರಣರಿಗೆ ಸಂಬಂಧಿಸಿದಂತೆ ಹಲವಾರು ಪದ್ಯಗಳನ್ನು, ಪುಟ್ಟ ಪುಟ್ಟ ನಾಟಕಗಳನ್ನು ರಚಿಸಿದ್ದರು.

ಅವರದು ಕಂಚಿನ ಕಂಠ. ಮಾತು, ಗಾಯನ ಎರಡರಲ್ಲೂ ಪ್ರವೀಣರು. ಇಷ್ಟಲಿಂಗ ನಿಷ್ಠರು. ಅಪ್ಪ ಬಸವಣ್ಣ ಎನ್ನದೇ ಅವರು ಬಾಯಿ ತೆರೆಯುತ್ತಿರಲಿಲ್ಲ. ಶರಣರ ವಿಚಾರಗಳನ್ನು ಅಸ್ಖಲಿತವಾಗಿ ಎಲ್ಲರ ಮನಮುಟ್ಟುವಂತೆ ತಿಳಿಸುತ್ತಿದ್ದರು.

ಬಿಳಿಯ ವಸ್ತ್ರಧಾರಿಗಳಾಗಿದ್ದ ಅವರ ಹಣೆಯ ಮೇಲೆ ಯಾವಾಗಲೂ ಮೂರು ಬೆಟ್ಟು ವಿಭೂತಿ ರಾರಾಜಿಸುತ್ತಿತ್ತು. ಬಸವ ತತ್ವ ಹೇಳುವ ವರನ್ನು ಮತ್ತು ಅದರಂತೆ ನಡೆಯುವವರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು.

ಭಾಲ್ಕಿ ಚನ್ನಬಸವ ಪಟ್ಟದ್ದೇವರ ಪರಮ ಶಿಷ್ಯರಾಗಿ ಕಲ್ಯಾಣದ ಅನುಭವ ಮಂಟಪದ ಜವಾಬ್ದಾರಿಯನ್ನು ಸಹ ಹೊತ್ತಿದ್ದರು. ಅವರನ್ನು 30 ವರ್ಷಗಳಿಂದಲೂ ಬಲ್ಲೆವು. ನಮ್ಮ ಬಗ್ಗೆ ಅಪಾರ ಭಕ್ತಿ, ಪ್ರೀತಿ, ಗೌರವ ಹೊಂದಿದ್ದರು. ಇಳಿವಯಸ್ಸಿನಲ್ಲಿ ಕಲ್ಯಾಣ ಬಿಟ್ಟು ದಾವಣಗೆರೆಯಲ್ಲಿ ತಮ್ಮ ಕಾಯಕ ಮುಂದುವರಿಸಿದ್ದರು. ಬಸವ ತತ್ವದ ಒಬ್ಬ ಸೇನಾನಿಯನ್ನು ಕಳೆದುಕೊಂಡಂತಾಗಿದೆ. ಗೃಹಸ್ಥರಾಗಿದ್ದ ಅವರು ಶರಣ ತತ್ವಕ್ಕೆ ತಮ್ಮನ್ನು ಅರ್ಪಿಸಿಕೊಂಡ ನಂತರ ಶುದ್ಧ ಸಾಧುಗಳೇ ಆಗಿದ್ದರು. ಅಂಥವರ ಸಂತತಿ ಮತ್ತೆ ಉದಯಿಸಲಿ ಎಂದು ಪಂಡಿತಾರಾಧ್ಯ ಶ್ರೀಗಳು ಆಶಿಸಿದ್ದಾರೆ.



## ಬಿ.ಟಿ. ಸಮೂಹದ ಶೇ.24.5 ಪಾಲು ಖರೀದಿಸುವ ಭಾರತಿ

ನವದೆಹಲಿ, ಆ. 12 - ಬ್ರಿಟನ್‌ನ ಅತಿ ದೊಡ್ಡ ಟೆಲಿಕಾಂ ಕಂಪನಿಯಾಗಿರುವ ಬಿ.ಟಿ. ಸಮೂಹದ ಶೇಕಡ 24.5ರ ಪಾಲುಗಾರಿಕೆಯನ್ನು ಸುನಿಲ್ ಭಾರತಿ ಮಿತ್ತಲ್ ಅವರ ಸಮೂಹ ಖರೀದಿಸಲಿದೆ. ಆ ಮೂಲಕ ಬಿ.ಟಿ. ಕಂಪನಿಯಲ್ಲಿ ಭಾರತಿ ಎಂಟರ್‌ಪ್ರೈಸಸ್ ಅತಿ ದೊಡ್ಡ ಪಾಲುದಾರವಾಗಲಿದೆ. ಭಾರತಿ ಎಂಟರ್ ಪ್ರೈಸಸ್‌ನ ಅಂತರ ರಾಷ್ಟ್ರೀಯ ಹೂಡಿಕೆ ವಿಭಾಗ ವಾಗಿರುವ ಭಾರತಿ ಗ್ಲೋಬಲ್, ಬಿಟಿ ಸಮೂಹದ ಶೇ.9.99 ರಷ್ಟು ಪಾಲುಗಾರಿಕೆ ಖರೀದಿಸಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಭಗೀರಥ ಲೇಔಟ್, ಆಂಜನೇಯ ಮಂಟಪ, ಕರಿಯಮ್ಮ ದೇವಸ್ಥಾನ, ಚಿಕ್ಕನಹಳ್ಳಿ ಹೊಸ ಬಡಾವಣೆ, ಮಣಿಕಂಠ ಸರ್ಕಲ್, ರಾಷ್ಟ್ರೋತ್ಥಾನ ಶಾಲೆ, ಕಲ್ಲು ಬಡಾವಣೆ, ಜಯನಗರ ಚರ್ಚ್ ಎದುರು, ಶ್ರೀರಾಮ ಬಡಾವಣೆ, ನಿಟುವಳ್ಳಿ, ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕ ದೇವಸ್ಥಾನ, ಇ.ಎಸ್.ಐ ಆಸ್ಪತ್ರೆ, ನಿಟ್ಟುವಳ್ಳಿ ಸಂತೆ ಮಾರ್ಕೇಟ್, 60 ಅಡಿ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ನಾಳೆ ರಂಗೋಲಿ ಸ್ಪರ್ಧೆ

ದಾವಣಗೆರೆ, ಆ. 12 - ಹರ್‌ಘರ್ ತಿರಂಗಾ ಕಾರ್ಯ ಕ್ರಮದ ಅಂಗವಾಗಿ ನಗರದ ಗ್ಲಾಸ್ ಹೌಸ್ ಆವರಣದಲ್ಲಿ ನಾಡಿದ್ದು ದಿನಾಂಕ 14 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಹರ್ ಘರ್ ತಿರಂಗಾ ರಂಗೋಲಿ ಸ್ಪರ್ಧೆ ಕಾರ್ಯಕ್ರಮ ಏರ್ಪ ಡಿಸಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಭಿಕುಮಾರ್ ತಿಳಿಸಿದ್ದಾರೆ.

|| ಶ್ರೀ ಶಿವ ನಾರದಮುನಿ ಪ್ರಸನ್ನ ||

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 28.11.1966

ನಿಧನ : 10.08.2024

ದಾವಣಗೆರೆ ತಾ. ಜಿ. ಎಲೆಬೇತೂರು ಗ್ರಾಮದ ವಾಸಿ
ದಿ.ಶ್ರೀಮತಿ ಅನುಸೂಯಮ್ಮ ದಿ. ಬುಡ್ನಾರಪ್ಪ ಬಸಪ್ಪನವರ ಮಗನಾದ
ಬುಡ್ನಾರಪ್ಪ ನಾಗರಾಜಪ್ಪ ಮತ್ತು ಸಹೋದರರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ,

ದಿನಾಂಕ : 10.08.2024ನೇ ಶನಿವಾರ ರಾತ್ರಿ 01.17ಕ್ಕೆ ನನ್ನ ಸಹೋದರರಾದ

## ಬುಡ್ನಾರಪ್ಪ ದಿ. ಶ್ರೀ ಕರಿಬಸಪ್ಪ

ಕಾಂಗ್ರೆಸ್ ಮುಖಂಡರು, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು ಹಾಗೂ ಹಾಲಿ ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರು

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

## ಕೈಲಾಸ ಶಿವಗಣಾರಾಧನೆಯನ್ನು

ದಿನಾಂಕ : 14.08.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಶರಣ ಬಸವೇಶ್ವರ ಕಲ್ಯಾಣ ಮಂಟಪ, ಬಿ. ಕಲ್ಪನಹಳ್ಳಿ, ದಾವಣಗೆರೆ ತಾ. ಜಿ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬದವರು :

- ಶ್ರೀಮತಿ ರೇಣುಕಮ್ಮ ಬಿ.ಕರಿಬಸಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಮತ್ತು ಮಕ್ಕಳು
- ಶ್ರೀಮತಿ ಮಂಜುಳ, ಶ್ರೀಬಿ. ನಾಗರಾಜಪ್ಪ ಮತ್ತು ಮಕ್ಕಳು
- ಶ್ರೀಮತಿ ಕಲ್ಪನಾ ಶ್ರೀ ಬಿ.ಶಿವಕುಮಾರ್, ಗ್ರಾ.ಪಂ.ಸದಸ್ಯರು ಮತ್ತು ಮಕ್ಕಳು
- ಶ್ರೀಮತಿ ಬಸಮ್ಮ ಶ್ರೀ ದೇವರಾಜಪ್ಪ ಮತ್ತು ಮಕ್ಕಳು, ಸಿರಿಗೆರೆ.
- ಶ್ರೀಮತಿ ಅಕ್ಕಮ್ಮ ಶ್ರೀ ವಿಶ್ವೇಶ್ವರಪ್ಪ ಮತ್ತು ಮಕ್ಕಳು, ಬೆಣ್ಣೆಹಳ್ಳಿ
- ಶ್ರೀಮತಿ ನಯನ, ಶ್ರೀ ವಿನಾಯಕ • ಚಿ|| ದಯಾನಂದ್, ಬುಡ್ನಾರಪ್ಪರ ವಂಶಸ್ಥರು ಮತ್ತು ಎಲೇಬೇತೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 99005 65472, 95358 51819

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಬುಧವಾರ, 14ನೇ ಆಗಸ್ಟ್ 2024 । ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

ದಾವಣಗೆರೆಯಲ್ಲಿ ಪ್ರಪ್ರಥಮ ಬಾರಿಗೆ
ಸೆಕೆಂಡ್ ಹ್ಯಾಂಡ್ ಮೊಬೈಲ್ ಎಕ್ಸ್‌ಕ್ಲೂಸಿವ್ ಶೋ ರೂಂ
Dwitiya
Vishara Tele Mobiles
Your Search For Quality Used Mobiles Ends Here
Flipkart Certified Mobiles with Warranty
ಪ್ರಾರಂಭೋತ್ಸವ, ಸ್ವಾತಂತ್ರ್ಯೋತ್ಸವ ಮತ್ತು ವರಮಹಾಲಕ್ಷ್ಮಿ ಹಬ್ಬಗಳ ಪ್ರಯುಕ್ತ ಮೆಗಾ ಆಫರ್
On Every Mobile Purchase get FREE... Smart Watch, Ear Buds, Protective Glass, Back Cover
ಈ ಆಫರ್ ಆಗಸ್ಟ್ 18ರವರೆಗೆ ಮಾತ್ರ
BAJAJ FINSERV & CREDIT CARDS EMI AVAILABLE
ಕೆ.ಟಿ.ಜೆ. ನಗರ, 1ನೇ ಕ್ರಾಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ಸುಬ್ರಮಣ್ಯ ಗ್ಯಾಸ್ ಏಜೆನ್ಸಿ ಪಕ್ಕ, ದಾವಣಗೆರೆ – 02.
63622 34358, 63603 52375

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳ









ಭೂಮಿ ಪೂಜೆ
ದಿನಾಂಕ : 13.08.2024ರ ಮಂಗಳವಾರ

ಸನ್ಮಾನ್ಯ ಶ್ರೀ ಶಾಮನೂರು ಮಲ್ಲಿಕಾರ್ಜುನ್
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ



| | ಉದ್ಘಾಟನಾ ಕಾಮಗಾರಿಗಳು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಸ್ಥಳ ಮತ್ತು ಸಮಯ |
|---|---|---|---|
| 1) | ವಾರ್ಡ್ ನಂ. 16 ವಿನೋಬನಗರ 1ನೇ ಮುಖ್ಯ ರಸ್ತೆಯ ಹಳೆ ಪೂನಾ-ಬೆಂಗಳೂರು ರಸ್ತೆಯಿಂದ 8ನೇ ಕ್ರಾಸ್‌ವರೆಗೆ ಒಂದು ಬದಿಯಲ್ಲಿ ಸಿ.ಸಿ.ಚರಂಡಿ, ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮತ್ತು ಕವರಿಂಗ್ ಅಳವಡಿಸುವ ಕಾಮಗಾರಿ. | 50.00 | ಗಣೇಶ ದೇವಸ್ಥಾನದ ಹತ್ತಿರ, ವಿನೋಬನಗರ ಸಮಯ : ಮಧ್ಯಾಹ್ನ 1 ಗಂಟೆಗೆ |
| | 1) ವಾರ್ಡ್ ನಂ. 16 ವಿನೋಬನಗರ 1ನೇ ಮುಖ್ಯ ರಸ್ತೆಯ 8ನೇ ಕ್ರಾಸ್‌ನಿಂದ 17ನೇ ಕ್ರಾಸ್‌ವರೆಗೆ ಒಂದು ಬದಿಯಲ್ಲಿ ಸಿ.ಸಿ. ಚರಂಡಿ, ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮತ್ತು ಕವರಿಂಗ್ ಅಳವಡಿಸುವ ಕಾಮಗಾರಿ. 2) ಎಂ.ಸಿ.ಸಿ. ಎ ಬ್ಲಾಕ್ ರೆಡ್ಡಿ ಬಿಲ್ಡಿಂಗ್‌ನಿಂದ ವಿನೋಬನಗರ 2ನೇ ಮುಖ್ಯರಸ್ತೆ ಶ್ರೀ ಗಣೇಶ ದೇವಸ್ಥಾನದವರೆಗೆ ರಸ್ತೆ ಅಗಲಿಕರಣ ಮತ್ತು ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ | 130.00 | |
| 2) | 1) ವಾರ್ಡ್ ನಂ. 38ರ ಎಂ.ಸಿ.ಸಿ. ಬಿ ಬ್ಲಾಕ್, 2ನೇ ಕ್ರಾಸ್ 1ನೇ ಮೇನ್‌ನಿಂದ 6ನೇ ಮೇನ್‌ವರೆಗೆ ರಸ್ತೆ ಮತ್ತು ಪೇವರ್ಸ್ ಅಳವಡಿಸುವ ಕಾಮಗಾರಿ 2) ವಾರ್ಡ್ ಸಂಖ್ಯೆ: 38 ರ ಜಿಲ್ಲಾ ಕ್ರೀಡಾಂಗಣ ಆವರಣದ ಒಳಗಡೆ ಕ್ರೀಡಾ ಪಟುಗಳಿಗೆ ವಿಶ್ರಾಂತಿ ಕೊಠಡಿ ನಿರ್ಮಾಣದ ಕಾಮಗಾರಿ | 63.00 | ಮೋತಿವೀರಪ್ಪ ಅವರ ಮನೆಯ ಹತ್ತಿರ ಸಮಯ : ಮಧ್ಯಾಹ್ನ 1.30 ಗಂಟೆಗೆ |
| | Providing and Fixing of interlock pavers in MCC B Block 2nd and 3rd main road | 198.27 | |
| 3) | 1) ವಾರ್ಡ್ ನಂ 30. ಆವರಗೆರೆ ಟೀಚರ್ ಕಾಲೋನಿಯಲ್ಲಿ ಉತ್ತಮ್‌ಚಂದ್ ಬಡಾವಣೆ ಮುಖ್ಯ ರಸ್ತೆಯಿಂದ ನಂಜಾನಾಯ್ಕ್ ಇವರ ಮನೆ ರಸ್ತೆ ಮತ್ತು ಪಕ್ಕದ ರಸ್ತೆ, ಶೇಖರಪ್ಪ ಬಡಾವಣೆ 1ನೇ ಮೇನ್‌ನಿಂದ ಪರಿಶಿಷ್ಟ ಪಂಗಡದ ಹಾಸ್ಟೆಲ್‌ವರೆಗೆ ಹಾಗೂ ಕೆ ಎಸ್‌ಆರ್ ಟಿ ಸಿ ಲೇಔಟ್‌ನ 1ನೇ ಮೇನ್ ಶಿಕ್ಷಕರ ಬಡಾವಣೆ 2ನೇ ಹಂತ 1ನೇ ಮೇನ್ ರಸ್ತೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ 2) ವಾರ್ಡ್ ನಂ. 30 ಶೇಖರಪ್ಪ ಬಡಾವಣೆ 1ನೇ ಮೇನ್‌ನಿಂದ ಬ್ಯಾಂಕ್ ಕಾಲೋನಿ ಉದ್ಯಾನವನಕ್ಕೆ ಹೊಂದಿಕೊಂಡಿರುವ ರಸ್ತೆ ಮತ್ತು ಪಕ್ಕದ ಪಾಟೀಲ್ ಹೆಲ್ತ್ ಕೇರ್ ಮುಂಭಾಗದ ರಸ್ತೆಗೆ ರಸ್ತೆ ಮತು ಚರಂಡಿ ಅಭಿವೃದ್ಧಿ ಕಾಮಗಾರಿ. 2) Providing and Fixing of interlock pavers in P Basavanagouda badavane main road (PB road to RUB) | 150.00 | ಕರೇಗೌಡರ್ ಮನೆಯ ಹತ್ತಿರ ಸಮಯ : ಮಧ್ಯಾಹ್ನ 2.00 ಗಂಟೆಗೆ |
| 4) | ವಾರ್ಡ್ ನಂ.43, ಹೊಸ ಕುಂದುವಾಡದ ಮುಖ್ಯ ರಸ್ತೆಯಲ್ಲಿ ಚರಂಡಿ ಎತ್ತರಿಸಿ ಕವರಿಂಗ್ ಸ್ಲ್ಯಾಬ್ ಅಳವಡಿಸುವುದು ಹಾಗೂ ಎಸ್.ಎ. ರವೀಂದ್ರನಾಥ್ ಬಡಾವಣೆಯಲ್ಲಿ ಪೈಪ್ ಚರಂಡಿ ಮತ್ತು ವಿವಿಧ ಕ್ರಾಸ್‌ಗಳ ರಸ್ತೆ ಅಭಿವೃದ್ಧಿ ಕಾಮಗಾರಿ. | 100.00 | ಹೊಸ ಕುಂದುವಾಡ ಸಮಯ : 2.30 ಗಂಟೆಗೆ |
| 5) | ವಾರ್ಡ್ ನಂ. 31 ರ ವ್ಯಾಪ್ತಿಯಲ್ಲಿ ಬರುವ ಎಸ್.ಓ.ಜಿ. ಕಾಲೋನಿ ಸಿ ಮತ್ತು ಬಿ ಬ್ಲಾಕ್ ಮುಖ್ಯ ರಸ್ತೆ ಸರ್ಕಾರಿ ಉನ್ನತೀಕರಿಸಿದ ಶಾಲೆಯಿಂದ ಚಾನಲ್‌ವರೆಗೆ ಸಿಸಿ ರಸ್ತೆ ಅಭಿವೃದ್ಧಿ ಪಡಿಸುವುದು | 100.00 | ಎಸ್.ಓ.ಜಿ ಕಾಲೋನಿ ಬಿ ಬ್ಲಾಕ್ ಸರ್ಕಾರಿ ಶಾಲೆಯ ಹತ್ತಿರ. ಸಮಯ : 3.00 ಗಂಟೆಗೆ |

ಈ ಕಾಮಗಾರಿಗಳ ಭೂಮಿ ಪೂಜೆ ಸಮಾರಂಭಕ್ಕೆ ಆಗಮಿಸುತ್ತಿರುವ ಮಹಾನಗರ ಪಾಲಿಕೆಯ ಮಹಾಪೌರರು, ಆಯುಕ್ತರು, ಸದಸ್ಯರುಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ- ಸುಸ್ವಾಗತ

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas